G. R. S. App. F. IX-4]

1943-44

W File No. 102-43.

Previous References.

(War)

Serial Nos. 1 to 8.

Later References.

P 38

GENERAL AND REVENUE SECRETARIAT

Serial Nos. Eight only.

Part B for Jan. '44

SUBJECT

Books for Indian Troops.

T.R.Krishnan
11.1.44.

1 From - The Secy to Govt Punjab
P. 42 4/W d 11th Sept 43. requesting to be
informed what Names any books in English or Urdu
which this Govt works recommend for distribution
to units recruited from the Punjab State.

Perhaps this question may be dealt with
in the Mily Section in consultation with the CC MST
The books are understood to be distributed to units
recruited from the Punjab State. Govt's proposal

(PS 1519) The Directors of Publicity
Information, Health & Agriculture &
the Govt Librarian may be consulted

Lt
29/9

WO
29/9/43

Govt's with a draft to the above offices.

(PS 2819) 2 Lt Col
Issue 727-30/W d 11th ordering to the DPD. Re
Dr Agri & Dr Health

T 28 SEP 1943 GEN. 3 From The DPD.
T2-1421-21/W 44 d 29th ordering Stating that the DPI
has not published any books on the subjects mentioned
English or Urdu suitable for troops.

Govt's proposal only books published
in English or Urdu are required. The reports from
the other offices will be awaited.

(PS 1171) Sec

12 88/W

4. From The Dir of Progs
L.67/40 44 d 6th Nov. 43 forg a list of books
The Reg letter wants books published
in English or Urdu but the present list seems to
be books published in Kannada. Asked with a draft
reminder to the Rec't Dir'r H

(RS) 3/7 Sec

[55Cia 1000-1/43 d 18th Nov 43 w b to Rec't Dir'r H

5. From The Recr't.
C.L.O. 162/40 44 d 23rd Nov. 43 forg a list of books
The books now recommended are those
already published by the Dir of Progs. The Rec't
has also written to the Dir of Progs H. The reply of
the Dir of Progs H will be awaited

25/12

6. 25/12 (RS) From The Dir of Progs H.
8W 75/11 Ltr 200 d 13th Dec. 43 forg a list of pamphlets
published by his Dept from time to time.
The Reg letter specifically wants the Names
of any books published either by the Govt or Commercial
publishers in English or Urdu which the Govt
Works Recommend for distribution to units recruiting from the
State. The books now recommended by the Heads of Depts are
in Kannada only. Asked for perusal and orders as to the
reply to be sent to the Reg in the matter.
The book which appear may also
be examined if there are any
books published by the Dir of Progs
of the Language
recommended
for distribution among the
Troops

From The Regr
C.L.O. 162/40 44 d 12th Dec. 43 forg-
-ding letter received
from the Govt of India
for Read Dept. (RS)
14/12 Sec.

Continuation Sheet. 1467/1942 File No. / Current No. of Page.

Books for Jordan Troops. 1042/W.

For kind orders if copies of the following books available in the Publicity Office may be recommended for distribution to Units recruited from the Mysore State: -

1) War Effort in Mysore.
2) H. H. the Late Maharaja Sri Krishnaraja Wadiar Bahadur IV by V. Subrahmanya Iyer.
3) Harijan Uplift in Mysore.
4) Medical Relief in Mysore.
5) Village Uplift in Mysore.
6) Mysore Information Bulletin (monthly as they are published).

JSR 3/1/44.

(Mysore Secy War) 3-1-44

GOVT. OF MYSORE 5588 3 JAN. 1944

Even these books are not of the type required. A reply can be sent that these are no books which can be conveyed

3/1

(Mysore Secy)

FC Section
Date 8/1/44
No. 4241

Min Edn

WO 5/1/44 hr

8/1/44

WO 8/1/44

TYPE SECTION
GEN. & REV. SECTT.

Subd with a draft reply & to a Rep

RS 10/1

Books for Indian Troops

Continuation Sheet. W File No. / Current No. 102 of 43-44 Page.

8

Issued Vide Pol. 1399 Dt. 10.1.44 to the Resy.

WD 0972—GPB—10,000—21-10-42

W 102-43-1 Pol. with 694 W.

The reply to this communication should be addressed to the Secretary to the Resident in Mysore, Bangalore, by designation and not by name.

No. F.42-41/W.

FROM

THE SECRETARY
TO THE HON'BLE THE RESIDENT IN MYSORE.

To

The Chief Secretary to the Government of
His Highness the Maharaja of Mysore,
Bangalore.

Dated Bangalore, the 11-September *1943.*

Books for Indian troops.

SIR,

I am directed to state that General Headquarters, India, Adjutant General's Branch, propose to provide each unit in the Indian Army with a few simple and practical books on the subject matter of welfare education, such as health, farming, uplift etc. I am therefore to request that this Residency may kindly be informed as soon as possible of the names of any books (published either by the Government of Mysore or by commercial publishers) in English or Urdu which the Government of Mysore would recommend for distribution to units recruited from the Mysore State.

War

CHIEF SECRETARIAT
13. SEP. 1943
GOVT. OF MYSORE.

I have the honour to be,
Sir,
Your most obedient servant,

for SECRETARY TO THE RESIDENT.

MA

Appendix F. G.—1]

SUBJECT.....

.....

.....

Diary No. of letter replied to.....694.....

General and Revenue Secretariat

( )

the *194*

Date of issue..1-10-43.....

Signed by.....Mrs GKN.....

List of enclosures.....

Copied by.....

Examined by.....

Section War

File No. 102-43

Serial No. 2.

No. W. 727-30 dated 1-10-43 R. C. ✓

To The D P I ✓
Dy Agri ✓
Dy Health.

Books for Indian Troops

Sir,

I am directed to enclose herein a copy of Army letter dt 11th Sept. R. 40 on the above subject and to request you kindly to furnish your opinion as to the books which may be recommended by this Govt for distribution to units recruited from the Myo. Stt.

I have
&c
for Chief Secretary

Edn. 132]

W 102-43-3.

1042

Postal Address:—POST BOX No. 6
Tel. Address:—EDUCAGEN, Bangalore.

Department of Public Instruction.

Government of Mysore.

No. T2. 1431-31/43-44.

OFFICE OF THE DIRECTOR OF PUBLIC INSTRUCTION IN MYSORE,

ENCL.

Bangalore, dated 28th October *19*43.

FROM M. Sultan Mohiyuddin, Esq.M.A., LL.B., M.Ed
~~A. R. VIDIA, Esq., B.A.,~~
DIRECTOR OF PUBLIC INSTRUCTION IN MYSORE,
BANGALORE.

To

M. Vedavyasacharya, Esq., B.A.,
Chief Secretary to Government, Bangalore.

CHIEF SECRETARY

Subject.- Books for Indian Troops on Welfare Education such as health, farming, uplift etc.

Adverting to your letter No. W.727-30 dated 1-10-1943 on the above subject, I have the honour to state that the Department has not published any books on these subjects in English or Urdu suitable for Indian Troops. The departmental books on these subjects prepared for use by pupils in schools are technical in treatment and will not serve the purpose in view.

The Indian Red Cross Society and the Director of Agriculture may have published simple and practical books on health matters and farming and agriculture respectively that would be useful to the units in the army.

If kannada books are wanted, the following books may be found useful.-

1. Mysore University Pracharamala series - Nos. 2,3,5,9,11, 13, 14,20,30,37,38,43,44 and 47 (Price 3 Annas each).
2. All the five Publications of the Sir K.P. Puttanna Chetty Endowment series (Price 3 annas each).
3. The Adult Education Pamphlets of the Mysore State Literacy Council, Mysore.

I have the honour to be,
S i r,
Your most obedient servant,

M. S. Mohiyuddin
Director.

Sr. 28-10.

29/10

W 102-43-4.

1162/W

C. F. No. 45]

GOVERNMENT OF MYSORE

Telegram / phone

OFFICE OF

The Director of Agriculture in Mysore

No. L.67/43-44
Encls.

Bangalore.

Date 8th November 1943.

To

The Chief Secretary to Government

of His Highness the Maharaja of Mysore,

Bangalore.

War 13 Sir,

SUBJECT:- Books for Indian Troops

I have the honour to state that the subject of your letter No.W.727-30 dated 1st October 1943 has been received in this office in letter No.C.L.O.161/43-44 from the Revenue Commissioner and Civil Representative in Mysore, Bangalore, as well. I recommend the following books and have the honour to make a suggestion or two, if more literature is required.

(a) 1. VYAVASAYADA MANNUGALU - To be had of the University of Mysore.

2. SARALA VYAVASAYA)
3. VYAVASAYA BODHINI) - Mysore Education Department
4. VYAVASAYA SASTRA)

5. PASHU VAIDYA - 1918 (if copies are available) -do-

6. MYSORU KAITHOTAGALA VYAVASAYA - J.Cameron, Board of Agriculture, 1921. - Horticultural Department.

(b) 1. Books may be chosen from among the PRACHAROPANYASA MALE of the University of Mysore;
2. As also from among the post literary publications of the Mysore State Literary Council may be chosen.

(c) Much material is to be found in the publications of the Agricultural Department and the Journals of the Agricultural and Experimental Union which, if published in booklet form, will supply the kind of literature required.

I have the honour to be,
Sir,
Your most obedient servant,

Director of Agriculture.

HSV

8/11/43

Appendix F. G.—1]

SUBJECT.....

.....

.....

Diary No. of letter replied to.....1162.....

General and Revenue Secretariat

( )

the *194*

ate of issue..... 18.11.43.....

Signed by..... Mr SKV.....

List of enclosures.....

Copied by.....

Examined by.....

Section Engst

File No.

Serial No.

No. W.1000-1001 R.C ✓ ✓

To Dr. P. H.

Books for Indian Troops.

Sir,

I am directed to invite reference to this office letter No 727-36/W & 1st Octr. 43 on the above subject and to request you kindly to expedite your reply in the matter, since a communication has to go to the Resy

I have the honour to be,
Sir,
Your obedient servant,
for Chief Secretary to Govt

WD 04161—GPD—60,000—24-10 41

W102-43-5.

1288/W

No. C.L.O. 162/43-44.

OFFICE OF THE REVENUE COMMISSIONER AND
CIVIL REPRESENTATIVE IN MYSORE

Bangalore, dated 23rd Novr. 1943.

To

V. VEDAVYASACHARYA, Esq., B.A.,
Chief Secretary to Government
of Mysore, Bangalore.



BOOKS FOR INDIAN TROOPS.

Referring to the correspondence ending with your letter No. W. 1000-1001 dated 18th Nov. 1943 on the above subject, I have the honour to state that the Director of Public Instruction and the Director of Agriculture in Mysore, were consulted on the subject.

The Director of Public Instruction has stated that there are no books published either in English or Urdu on the subject matter referred to in the Residency letter, suitable for distribution to units recruited from Mysore. He has however, recommended some Kannada books (vide his letter No. T.2 1431-31/43-44 dated 28th Oct. 1943 addressed to you direct). The Director of Agriculture has also recommended some books (vide his letter No. L. 68/43-44 dated 8/11th Nov. 1943 addressed to you direct).

I think, a selection may be made out of the books recommended by them, particularly the following, if found suitable:-

1. "Mysooru Kaithotagala Vyavasaya"-J. Cameron.
2. Mysore University pracharamala series Nos. 2,3, 5,9,11,13,14, 20, 30, 37, 38, 43, 44, and 47 (Price annas three each).
3. All the five publications of the Sir K.P. Puttanna Chetty Endowment series (Price annas three each).
4. The Adult Education Pamphlets of the Mysore State Literacy Council, Mysore.

P.T.O.

Regarding books on the subject matter of Health Education, I have consulted the Director of Public Health in Mysore. further reply will be sent to you as early as possible.

I have the honour to be,
Sir,
Your most obedient servant,

M Seshadri

REVENUE COMMISSIONER &
CIVIL REPRESENTATIVE.

BN

THE DIRECTOR OF PUBLIC HEALTH
IN MYSORE,
BANGALORE.

NO. HE. 250 W102-43-6. 1453 W
Encls: 4.

13th December 1943.

From

The Director of Public Health
with the Govt: of Mysore,
Bangalore.

To

The Chief Secretary
to Govt: of Mysore,
Public Offices, Bangalore.

SIR,

BOOKS FOR INDIAN TROOPS

With reference to your Office letter No. 727-30/W. dated 1-10-43 on the above subject, I have the honour to inform that the following Kannada pamphlets published by this Department from time to time on the subject of Welfare education and health are available and the same may be recommended for distribution to the Units recruited from the Mysore State:

1. HOOKWORM DISEASES .. (Kannada)
2. HEALTH SONGS .. "
3. AROGYA TATHWA .. "
4. LEPROSY & ITS CONTROL IN INDIA "

I have the honour to be
Sir,
your most obedient servant,

DIRECTOR OF PUBLIC HEALTH

W102-43-4. 1467 W

No;CL.O. 162/43-44.

OFFICE OF THE REVENUE COMMISSIONER
CIVIL REPRESENTATIVE IN MYSORE
Bangalore, dated 12th ~~Nov.~~ Dec. 1943.

To

V.VEDAVYASACHARYA, Esq., B.A.,
Chief Secretary to Government.
of Mysore, Bangalore.

War 9

BOOKS FOR INDIAN TROOPS.

Sir,

1286 W

In continuation of this office letter of even number dated 24th November 1943 on the above subject, I have the honour to forward herewith a copy of letter No. R.D. 2256/43-44 dated 1st December 1943 since received from the Special Officer for Rural Development in Mysore, on the subject, recommending certain Kannada books for distribution among the troops recruited from the Mysore State.

I have the honour to be,
Sir,
Your most obedient servant,

REVENUE COMMISSIONER
CIVIL REPRESENTATIVE.

BN.

BN P.T.O.

Copy of letter No. R.D. 2256/43-44 dated 1st December 1943 from the Rural Development Officer, Bangalore to the Civil Representative in Mysore, Bangalore.

Sir,

Adverting to your letter No. C.L.O. 161/43-44 dated 13.10-43 requesting me to send a list of simple and practical books on Welfare Education such as Health, Rural Uplift etc., published by the Government of Mysore or commercial publishers in Kannada, English or Urdu, which may be recommended for distribution among the troops recruited from the Mysore State, I have the honour to furnish the same in the margin*

---

*List of Books:-

1. ప్రథమ ఆరోగ్య మత్తు సామాన్య జ్ఞానదీపిక"

by Mr. K.T. Anantharamaiengar, L.M.P.,
P.K. Sanatorium, Mysore. Price 0-9-0.

2. ఆరోగ్య పాఠమాల

byMr. M.V.Sundareshan, M.A., L.T.,
Head Master, Government High School,
Mysore, Price 0- 5-0.

3. కిరణ ప్రథమ.
4. కిరణ మాలి

by Mr. D. Krishna Iyengar, M.A.,
Sub Registrar, Madhugiri.

5. ఆ యుర్వేదవల్లభ మహాశయ చెళ్ళిన గ్రంథములు.

by Vaidyavallabha M.G. Singriengar and others
available at the Government Press, Bangalore.

6. వికాస

a weekly published by the State Literacy Council,
Saraswathipuram, Mysore.

7. వయస్కుర విద్యా బుద్ధుల పుస్తక మొదటనేయ భాగ.
8 —ఱం— రెండనేయ భాగ

9 వయస్కుర గణిత కిరణ

10. నమ్మ మిత్రరు

by Mr. P.H. Krishna Rao, M.A.

11. వయస్కుర పఠన పుస్తక.

12. శ్రీ రుక్మిణీపతి చరిత్రె.

by Mr. N. Kasturi, M.A., B.L.,

items 6 to 12 are available with the Mysore State Literacy Council Saraswathi Puram, Mysore.

"Copy"

Appendix F. G.—1]

SUBJECT.....

.....

.....

Section War.

File No. 102-43

Serial No. 8.

Diary No. of letter replied to.....

General and Revenue Secretariat

( )

the *194*

Date of issue 10th Jan 1944

Signed by Mr. S. K. V.

No. Ed 1399

To The Secy to the Hon'ble the Resident

Books for Indian Troops.

Sir, With reference to your letter No F. 42-41/W dated 11th Sept. 40 requesting to be informed of the Names of any books in English or Urdu which this Govt would recommend for distribution to units recruited from this State I am directed to state that there are no books of the type required which can be suggested.

I have

for Secretary

For Chief Secretary to Govt

List of enclosures.....

Copied by.....

Examined by.....

WD 01.61—GPB—60,000—24-10-41

MYSORE DEPARTMENT OF HEALTH

Bureau of Health Education

HEALTH SONGS

ಆರೋಗ್ಯದ ಹಾಡುಗಳು

PRINTED AT

THE CAXTON PRESS, SHANKARPUR, BANGALORE CITY

1932

ಚಿಗಟಮಾರಿ (ಪ್ಲೇಗು)

(ನೋಟನ ಮಟ್ಟು)

ಆಹಹೆ ವರ್ಣಿಸುವೆನೆಂತೊ ಪ್ಲೇಗುಮಾರಿಯ ।
ಮಹಿಶೂರಪುರಕೆ ಬಂದ ಕಥೆಯ ಕೇಳಿರೆಲ್ಲರೂ ॥೧॥
ಬೊಂಬಾಯಿನಿಂದ ಬಂದಿತಣ್ಣ ಚಿಗಟಮಾರಿಯು ।
ನಿಂಬೇಯ ಹಣ್ಣಿನಂತೆ ಬರುವ ಗಡ್ಡೆಮಾರಿಯು ॥೨॥
ಓಡಿ ಓಡಿ ಹೋದರೆಲ್ಲ ಊರ ಬಿಡುತಲಿ ।
ಗಾಡಿ ಗಾಡಿಯಲ್ಲಿ ಜನರು ಸಾಗಿಹೋದರು ॥೩॥
ಇಲಿಯ ಮೈಯ್ಯ ಚಿಕಟದಿಂದ ಬರುವ ಸೋಂಕಿದು ।
ಇಲಿಗಳನ್ನು ಕೊಲಿಸಬೇಕು ಮನೆಯೊಳಿದ್ದರೆ ॥೪॥
ಕತ್ತಲಾದ ಕೋಣೆಯಲ್ಲಿ ಮುತ್ತಿಕೊಳುನವು ।
ಕಿತ್ತು ಕಿತ್ತು ತಿನ್ನುವವು ಮತ್ತೆ ಇಲಿಗಳಂ ॥೫॥
ನಾಕು ತೆರದಿ ಬರ್ಪುದೀ ಸೋಂಕು ಜಾಡ್ಯವು ।
ಜೋಕೆಯಿಂದ ಇರಲಿಬೇಕು ಲೋಕಮಾನ್ಯರೇ ॥೬॥
ಗಡ್ಡೆ ಬರುವುದೊಂದು ಬಗೆಯು ಬಾರದಿರ್ಪುದೊಂದು ।
ದಡ್ಡತನವ ಮಾಡದಂತೆ ನೋಡಿಕೊಳ್ಳಿರಿ ॥೭॥
ಸನ್ನಿಸಾತವೆಂಬುದಾಗಿ ಅನ್ನುವರೊಂದ ।
ಮುನ್ನಪೇಳೆ ಸಾಧ್ಯವಿಲ್ಲ ಇನ್ನು ಜನರಿಗೆ ॥೮॥
ವಾಂತಿಭೇದಿಯಾಗಿ ಬರುವುದೊಂದು ಬಗೆಯಿದು ।
ಶಾಂತಿಯಿಲ್ಲ ಜನಕೆ ಈ ಅಂತಕಾಜ್ಞೆಯಿಂ ॥೯॥
ಬಿಡದೆ ಜ್ವರವು ಬರುವುದೊಂದು ಮೊದಲ ಚಿಹ್ನೆಯು ।
ಒಡನೆ ಗಡ್ಡೆ ಕಾಣಿಸುವುದದೊಂದು ಚಿಹ್ನೆಯು ॥೧೦॥
ಕಣ್ಣು ಕೆಂಪಗಾಗಿ ನಾಲ್ಗೆ ತೊದಲು ಬರುವುದು ।
ಎಣ್ಣೆ ಸುರಿವವು ಮುಖ ಕಿಡಿಯ ಉಗುಳು ತಿರ್ಪುದು ॥೧೧॥
ಕೀಲು ಸಡಲಿದಂತೆ ಕಾಲು ಜೋಲು ಬೀಳುವುದು ।
ಏಳಲಾರದಂತೆ ರೋಗಿ ಗೆಳಗುತಿರ್ಪನು ॥೧೨॥
ಇಲಿ ಬಿದ್ದ ಮನೆಯ ಬಿಡಲಿಬೇಕು ತಡವ ಮಾಡದೆ ।
ಬೆಳಕು ಗಾಳಿ ಬರುವ ತೆರದಿ ಮಾಡಬೇಕಣ್ಣ ॥೧೩॥
ಊರ ಬಿಡಲುಬೇಕು ಮಾರಿ ಬಂದ ಕೂಡಲೆ ।
ಸೇರಗೊಡಿಸದಿರಲಿಬೇಕು ಇಲಿಯ ಮನೆಯಲಿ ॥೧೪॥
ಇಲಿಯು ಬಾರದಂತೆ ಮನೆಯ ಕಟ್ಟಬೇಕಣ್ಣ ।
ಬೆಳಕು ಗಾಳಿ ಮನೆಗೆ ಸದಾ ಬರಲಿಬೇಕಣ್ಣ ॥೧೫॥
ಕೊಳಕು ಮಾಡದಂತೆ ಮನೆಯನಿರಿಸಬೇಕಣ್ಣ ।
ಇಲಿಗೆ ತಿಂಡಿ ಸಿಕ್ಕದಂತೆ ಮುಚ್ಚಬೇಕಣ್ಣ ॥೧೬॥
ಒಂದು ಸಾರಿ ಬಂದ ಮನೆಗೆ ಮತ್ತೆ ಬರುವುದೀ ।
ಕೊಂದು ತಿಂಬ ಮಾರಿಯಿಂದ ಎಂದಿಗೆ ಸುಖಾ ? ॥೧೭॥
" ಇನಾಕ್ಯುಲೇಷನ್ " ಆಗಬೇಕು ಎಲ್ಲಾ ಜನರಿಗೆ ।
ಚೆನ್ನಾಗಿ ಚಿಮಣಿಯಣ್ಣೆ ಧೃತಿಯಿಂ ಮನೆಯ ತೊಳಿಯಿರಿ ॥೧೮॥
ಬೇವಿನೆಲೆಯ ಹೊಗೆಯ ಮನೆಗೆ ತುಂಬೆ ಮೇಲುಂಟು ।
ಸಾವ ತಪ್ಪಿಸಲ್ಕೆ ತಕ್ಕ ದೇವರಿರುವರು ಗಳ್ ॥೧೯॥

ಶಿಡುಬು

('ಧರಣಿಮಂಡಲ ಮಧ್ಯದೊಳಗೆ' ಎಂಬ ಗೋವಿನ ಹಾಡಿನಂತೆ)

ಶಿಡುಬು ಮಾರಿಯ ಕೆಡಕು ಪೇಳುವೆ ಬಡವರೇ ನೀವ್ ಕೇಳಿರೆಲ್ಲರು |
ತಡವ ಮಾಡದೆ ಮುಡದಿ ಮಕ್ಕಳ ಬಿಡದೆ ರಕ್ಷಿಪ ಮಾರ್ಗವ ||೧||

ಬಂದ ಮಾರಿಯು ಮಕ್ಕಳೆಲ್ಲರ | ಅಂದಗೆಡಿಪುದು ಕಣ್ಣು ಮುಖಗಳ |
ತೊಂದರೆಯನತಿಯಾಗಿ ಕೊಟ್ಟು | ಕೊಂದು ಬಿಡುವದು ಕಂದನ ||೨||

ಒಂದು ಮಗುವಿಗೆ ಬಂದರಿದು ಮನೆ | ಮಂದಿಗೆಲ್ಲವು ತೊಂದರೆ |
ಮುಂದನರಿಯದೆ ನಿಂದು ನೀವಳ | ಲಂದು ಕೇಳುವ ರಾರದ ? ||೩||

ತೊಟ್ಟಿಲೊಳಗಣ ಶಿಶುವಿಗುಂ ಮೇಣ್ | ಬೆಟ್ಟದ ಬೈರಾಗಿಗಳಿಗೂ |
ಹೊಟ್ಟೆ ಕಿವಿ ಬಾಯ್ಕಣ್ಣು ಮೂಗೊಳು | ಹುಟ್ಟ ಬಾಧಿಪ ಹುಣ್ಣಿದು ||೪||

ಹುಡುಗರಾಗಲಿ ಮುದುಕರಾಗಲಿ | ಬಡವರಾಗಲಿ ಬಲ್ಲಿದ ರಾಗಲಿ |
ಒಡೆಯರಾಗಲಿ ಆಳ್ಗಳಾಗಲಿ | ಬಿಡದು ಶಿಡುಬದು ಒಬ್ಬರಂ ||೫||

ಹೆಣ್ಣುಗಂಡಿನ ಭೇದವಿಲ್ಲವು | ಅಣ್ಣತಂಗಿಯ ವಾವೆಯಿಲ್ಲವು |
ಸಣ್ಣವನು ದೊಡ್ಡಾತನಿಲ್ಲವು | ಹುಣ್ಣಿಗಾದಾಕ್ಷಿಣ್ಯವು ||೬||

ಶಿಡುಬು ಎಡೆವಾಗದರ ಶಿಪ್ಪೆಯ | ಹೊಡೆದು ಬೀಸುವ ಗಾಳಿಯೊಳಗೆ |
ಬಿಡದೆ ಸೋಂಕದು ಹರಡುವುದು ನಾ | ಲ್ಮಡಿಯೊಳದು ಬಲುವೇಗದಿ ||೭||

ಇರಲು ಮೈಲಿಯ ದೂರದೊಳಗೆ | ಹರಡಿ ಕೊಂಬುದು ಗಾಳಿಯಿಂದ |
ಮರೆಯಲಾಗದು ಸೋಂಕಿದೆಂಬುದ | ನರಿತು ನಡೆಯಿರಿ ನೆರೆಯಲಿ ||೮||

ಹುಣ್ಣು ಹುಟ್ಟಿದ ಕಲೆಯು ಹೋಗದು | ಕಣ್ಣು ಹೋದರೆ ಮತ್ತೆ ಬಾರದು |
ಸಣ್ಣಮಕ್ಕಳು ಪಡುವ ಬಾಧೆಯ | ಬಣ್ಣಿಸಲುಬಲ ಸಾಲದು ||೯||

ಕಣ್ಣು ಹೋದರೆ ಶಿಡುಬಿನೊಳಗೆ | ಹೆಣ್ಣುಗಂಡಿಗೆ ಮದುವೆ ಯಾಗದು |
ಉಣ್ಣುವನ್ನವ ದುಡಿಯಲಾರರು | ಅಣ್ಣಗಳಿರಾ ಕೇಳಿರಿ ||೧೦||

ಓದು ಬರಹವ ಕಲಿಯಲಾರರು | ಹಾದಿ ಬೀದಿಲಿ ತಿರುಗ ಲಾರರು |
ಹೋದ ಕಣ್ಣನು ಪಡೆಯ ಲಾರರು | ಕಾದಲಾರರು ಯಮನೊಳು ||೧೧||

ಅಂಟು ಜಾಡ್ಯವಿದಾದರುಂ ಮೇಣ್ | ಉಂಟು ಔಷದಿ ಶಮನಮಾಡಲು |
ನೆಂಟರೇ ನೀವ್ ಕೇಳಿರಾಯಮ | ಭಂಟರನು ನೀವ್ ಒಡಿಸಿ ||೧೨||

ಶಿಡುಬು ಬಂದರೆ ಕೆಲವು ಜನಕೆ | ಹಿಡಿದುಕೊಂಬವು ಕೀಲ್ಗಳೆಲ್ಲ |
ಬಿಡದೆ ಕಣ್ಣೊಳು ನೀರು ಸುರಿವುದು | ಕಡಿಮೆ ಮಾಡೆ ಚಕಿತ್ಸೆಯ ||೧೩||

ಮಾರಿಯನು ನಾವ್ ದೂರಲೇತಕೆ | ದಾರಿಯಿದಕಿರೆ ಮಾಡದೆ |
ಕೋರಿದೊಡನೆಯೆ ದೇವಿ ಪಂಡಿತ | ಬಾರದಿರುವನೆ ಪೇಳಿರಿ ||೧೪||

ಶಿಡುಬು ಹಾಲನು ಕಡುವ ಕೆಚ್ಚಲ | ಬುಡಕೆ ಗಾಯವ ಮಾಡಿ ಹಾಕಲು |
ಬಿಡದೆ ಹುಣ್ಣದು ಮಾಗಿದಾಗಳೆ | ಕೊಡುವುಚೌಷಧಿ ಹಾಲನು ||೧೫||

ಇದನು ಗಾಜಿನ ಕೊಳವಿಯೊಳಗೆ | ಮುದದೊಳಡಗಿಸಿ ಮುಚ್ಚಿ ಇಡುವರು |
ಅದನು ಬೇಕಾದಾಗ ತೆಗೆದು | ಹದದಿ ಹಾಕುವ ಪಂಡಿತ ||೧೬||

ದೇವಿ ಪಂಡಿತ ಬಂದ ಕಾಲದಿ | ಸಾವಕಾಶವ ಮಾಡಬೇಡಿರಿ |
ನೋವ ಕೊಡದೆಲೆ ಮಕ್ಕಳೆಲ್ಲರ | ಸಾವ ತಪ್ಪಿಸಿ ಬದುಕಿಪಂ ||೧೭||

ದುಡ್ಡು ಕಾಸನು ಕೇಳನಿವನು | ದಡ್ಡತನವನು ಮಾಡಬೇಡಿರಿ |
ದೊಡ್ಡವರು ನೀವಾಗಿ ಮಕ್ಕಳ | ನೊಡ್ಡಿರಾತನ ಪ್ರೀತಿಗೆ ||೧೮||

ದೇವಿಪಂಡಿತ ತರುವ ರಸವದು | ಯಾವ ವಿಷವೂ ಅಲ್ಲವೆಂಬುದ |
ಭಾವದೊಳು ನೀವರಿತು ದೇಶದ | ಸೇವೆಯನು ಕೈಗೊಳ್ಳಿರಿ ||೧೯||

ಗೋವಿನಾರಸವಿದನು ಹಾಕಲು | ಆವ ಕಷ್ಟವೂ ಬಾರದಿರ್ಪುದು |
ಸಾವ ತಪ್ಪಿಪ "ವ್ಯಾಕ್ಸಿನೇಷನ್" ದೇವರೆಂದೇ ತಿಳಿಯಿರಿ ||೨೦||

ಬರಲು ವೈದ್ಯನು ನಿಮ್ಮೂರಿಗೆ | ಮರೆಯಮಾಡಲು ಬೇಡಿ ರೋಗವ
ದಿರಲು ಮೈಯೊಳಗಡಗಿದಾಗಳು | ಬರಿಸೆ ಹುಣ್ಣನು ಒಳ್ಳಿತು ||೨೧||

ದೂರ ಬೇಡಿರಿ ಬಯ್ಯಬೇಡಿರಿ | ಕ್ರೂರತನದಿಂದಟ್ಟಬೇಡಿರಿ |
ಊರು ಊರಲಿ ಜನರುಗಳಿಗುಪಕಾರಮಾಡುವ ವೈದ್ಯನ | ||೨೨||

ಪ್ರಾಪ್ತವಾಗಿಹ ಶಿಡುಬು ಮೈಯೊಳು | ಗುಪ್ತವಾಗಿಹ ಮೂರುದಿನದಲಿ |
ಕ್ಲಿಪ್ತವಾಗಿಹ ದೇವಿಹಾಕಿಸೆ | ಕ್ಲಿಪ್ತವೇ ಇದರುಪಟಳ ||೨೩||

ಮೂರು ತಿಂಗಳ ಮಗುವ ತೋಳನು | ಕೆರೆದು ಗಾಯವ ಮಾಡಿಕೊಂಡು |
ಎರೆದು ಔಷಧಿ ಹಾಲನದರೊಳು | ಬರಿಸುವನು ತಾ ಹುಣ್ಣನು ||೨೪||

ಎರಡು ತೋಳಿನೊಳಾರು ಹುಣ್ಣನು | ಬರಿಸಲವರಿಗೆ ಬರದು ಮಾರಿಯು |
ಎರಡನೇ ಸಲ ಐದು ನರ್ಷಕೆ | ಮರೆಯ ಬಾರದು ದೇವಿಯ ||೨೫||

ಬಾಲತನದೊಳಗಿಂತು ಗೈಯಲು | ಕಾಲಕಾಲದಿ ಬೆಳೆದು ಮಕ್ಕಳು |
ಲೀಲೆಯಿಂದಲಿ ಗೆಲಿವರವರು | ಕಾಲನೆಂಬುವ ಯಮನನು ||೨೬||

ಎರಡುಸಲ ನೀವ್ ದೇವಿ ಹಾಕಿಸೆ | ಬಂದು ಶಿಡುಬಿನ ಮಾರಿಯು |
ಕುರುಡರಾಗರು ಕುಂಟರಾಗರು | ಮರುಳರಾಗರು ಮಕ್ಕಳು ||೨೭||

ತ್ರಾಣವಿರಲೀ ದೇವಿವೈದ್ಯದಿ | ಪ್ರಾಣಹಾನಿಯ ದಾಗಲಾರದು |
ಕಾಣಿಪವು ಶಿಡುಬಲ್ಪ ಸಂಖ್ಯೆಯೊ | ಳಾಣಿಮುತ್ತಿನೆ ತೆರದಲಿ ||೨೮||

ತಲೆಯ ಕಾಯುವ ರಕ್ಷೆ ಶಿಡುಬನು | ಗೆಲುವ ಅಸ್ತ್ರವಿದೀ ಚಿಕಿತ್ಸೆಯು |
ಒಲಿದು ಬಾಲ್ಯದಿ ದೇವಿಹಾಕಿಸೆ | ಬಲಿತು ಮಕ್ಕಳು ಬೆಳೆವವು ||೨೯||

ವಯಸ ಕೇಳಳು ಶಿಡುಬು ಮಾರಿಯು | ದಯವ ತೋರಳು ಬಂದಮೇಲೆ ||
ಜಯವ ಕೋರುವರೆಲ್ಲರೊ ನಿ | ರ್ಭಯದಿ ಹಾಕಿಸಿ ದೇವಿಯ ||೩೦||

ನಾಡಿನೊಳಗೆ ನಗರದೊಳಗೆ | ರೂಢಿಮಾಡಲು ದೇವಿ ವೈದ್ಯನ |
ಕಾಡಳೊಬ್ಬರ ಶಿಡುಬು ಮಾರಿಯು | ಕಾಡ ಹೊಗುವಳು ನಿಲ್ಲದೆ ||೩೧||

ಮೊದಲೆ ಜನಕೆಚ್ಚರಿಕೆ ಕೊಡಲು | ಪದಗಳಿವುಗಳ ರಚಿಸಲಾಯಿತು |
ಇದರ ತತ್ವವ ತಿಳಿದು ನಡೆಯಲು | ಮುದದಿ ಬಾಳ್ವುವು ಮಕ್ಕಳು ೩೨||

"ಅಮ್ಮ" ಯೆಂದು ಕರೆದ ಮಾತ್ರಕೆ ಸುಮ್ಮನಿರುವಳೆ ಶಿಡುಬು ಮಾರಿಯು |
ಹೆಮ್ಮೆಯನು ತಾ ತ್ಯೋರಿ ಪೋಗುವ | ಳೊಮ್ಮೆ ಬಂದರು ಒಬ್ಬಗೆ ||೩೩||

ನಾಡಿನಾ ಜನರೆಲ್ಲ ಶಿಡುಬಿನ|ಹಾಡ ಕಲಿತರೆ ಕ್ಷೇಮವಹುದು |
ರೂಢಿಯೊಳಗಾಚರಿಸಲಿದ ಕೈ | ಗೂಡಿತೆಲ್ಲರ ಹರಕೆಯು ||೩೪||

MYSORE STATE DEPARTMENT OF HEALTH

(Bureau of Health Education)

ಶ್ರೀ

ಜಗನ್ನಾಥದೇವನ

ಆರೋಗ್ಯತತ್ವ

ಜೆ. ವಿ. ಕರ್ವೆ, ಎಂ.ಬಿ., ಸಿಪಿಹೆಚ್.ಬಿ., ಡಿ.ಪಿ.ಹೆಚ್.,

ಡೈರೆಕ್ಟರ್ ಆಫ್ ಪೆನ್ಸ್

ಬೆಂಗಳೂರು ತಾಳಿ ೧-೧೦-೩೪.

ಜಗನ್ನಾಥದೇವ

॥ ಧಾ

ಇರುಳೊಳಗೆ ಶುಚಿಯಾಗಿ ಶುಭ್ರಾಂ ।
ಬರದ ಹಾಸುಗೆಯಲ್ಲಿ ತಾಂ ಮಲ ।
ಗಿರುತೆ ನಿರ್ಮಲವಾಯುಸೇವನೆಯಿಂದೆ ನಿದ್ರಿಸುತ ॥
ತರಣಿಯುದಕೆ ಮುನ್ನಮೇಳುವ ।
ನರರು ದೀರ್ಘಾಯುವನೆ ಪಡೆವರು ।
ಧರೆಯೊಳೆಂದರುಹುವನು ತತ್ಪವನಾ ಜಗನ್ನಾಥ ॥೧॥

ಬೆಳಕು ಹರಿದೊಡನೆದ್ದು ದೇಹದ ।
ಮಲವಿನರ್ಜನೆಮಾಡಿ ದಂತಂ ।
ಗಳನೆ ಶುಚಿಗೈದಮಲಜಲದೊಳಗಂಗಕಲ್ಮಷವ ॥
ತೊಳೆದು ಸೂರ್ಯನಮಸ್ಕೃತಿಗಳನು ।
ನಲವಿಧಿಕ್ರಮದಿಂದೆ ಮಾಳ್ಪನು ।
ನುಲಭದಿಂದೆ ಚಿರಾಯುವಹನೆಂದನು ಜಗನ್ನಾಥ ॥೨॥

ಕುಡಿವನೀರ ಜಲಾಶಯಂಗಳ ।
ಕೆಡಿಸದಂತೊಂದೊಂದು ದಿವಸಕೆ ।
ಕುಡಿದು ನೀರನು ನಾಲ್ಕು ಲೋಟಗಳನಿತು ಮಿತವರಿತು ॥
ಕೆಡದಶಾಕಗಳೊಡನೆ ಸಂತಸ ।
ವಡೆದು ಪಕ್ವಾನ್ನವನು ಭುಜಿಪನು ।
ಪಡೆವ ದೀರ್ಘಾಯುವನೆನತ್ತರುಹಿದ ಜಗನ್ನಾಥ ॥೩॥

ಆರೋಗ್ಯತತ್ವ

ಪದ ॥

ತನುವೊಳಗೆ ರುಜೆಯಿಲ್ಲದಿಹ ಹಸು ।
ಪಿನೊಳು ಕರೆದ ಹಾಲನಾವನು ।
ದಿನಕೆ ಮೂರಾವೃತ್ತಿ ಹಿತಮಿತವಾಗಿ ಸೇವಿಸುತ ॥
ಇನಿದುಪಣ್ಗಳಸೆವಿವನಾ ಮನು ।
ಜನಿಗೆ ದೀರ್ಘಾಯುಷ್ಯವಹುದೆಂ ।
ದನಿಶ ಸಾರುತಲಿಹನು ತತ್ವವನಾ ಜಗನ್ನಾಥ ॥೪॥

ಮತಿಯನಿಲಿಸುತಲೇಕಪತ್ನೀ ।
ವ್ರತದೆ ದುರ್ವರ್ತನೆಗೆ ಪ್ರೋಗದೆ ।
ವಿತತ ಸತ್ಯಾಚಾರದಿಂ ಕರ್ತವ್ಯಗಳನೆಸಗಿ ॥
ಸತತವೆನ್ನನು ಹರ್ಷದಿಂದಲಿ ।
ನುತಿಪರಿಗೆ ದೀರ್ಘಾಯುವಹುದೆಂ ।
ಬತುಳತತ್ವವ ಜನಕೆ ಸಾರುವನಾ ಜಗನ್ನಾಥ ॥೫॥

ಇಲಿಗಳಾ ನೊಣಸೊಳ್ಕೆಗಳು ಮನೆ ।
ಯೊಳಗೆ ಸುಳಿಯುತೆ ಬಾಧಿಸದವೊಲು ।
ಪಲತೆರದೆ ಮನೆಗಳನು ಶುಚಿಯಾಗಿಟ್ಟುಕೊಂಡಿಹರು ॥
ತಳೆದು ದೀರ್ಘಾಯುವನು ಸುಖ ಮಂ ।
ಗಳವ ಪಡೆಯುವರೆಂಬ ತತ್ವವ ।
ನಿಳೆಗೆ ಸಾರುವನನಿಶವಾನರಹರಿ ಜಗನ್ನಾಥ ॥೬॥

" ಧರ್ಮಾರ್ಥಕಾಮಮೋಕ್ಷಾಣಾಂ

ಆರೋಗ್ಯಂ ಮೂಲಮುತ್ತಮಂ

" ಚರಕ "

ಆರೋಗ್ಯವೇ ಭಾಗ್ಯ!

ಬೆಂಗಳೂರು :

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರಿಂದ

ಮುದ್ರಿಸಲ್ಪಟ್ಟಿತು

1935

ಮೈಸೂರು ಸಂಸ್ಥಾನದ ಆರೋಗ್ಯ ಇಲಾಖೆ—ಪ್ರಸಿದ್ಧಪತ್ರಿಕೆ ನಂ. 14

(ಆರೋಗ್ಯತತ್ವ ಪ್ರಚಾರಶಾಖೆ)

ಅಕ್ಕ

"ಮೈಸೂರು ಆರೋಗ್ಯ," ಕಾಂಡ 5, ಸಂಖ್ಯೆ 2

ಜೂನ್ 1938ರಿಂದ ಎತ್ತಿ ಬರೆದಿದ್ದು

ಬೆಂಗಳೂರು:

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಟೆಂಡೆಂಟರವರಿಂದ ಮುದ್ರಿಸಲ್ಪಟ್ಟಿತು

1939

ಅಕ್ಕಿ.

ನಮ್ಮ ಮೈಸೂರು ಸಂಸ್ಥಾನದಲ್ಲಿ ಪ್ರತಿವರ್ಷವೂ ನುಮಾರು ಏಳುವರೆ ಲಕ್ಷ ಎಕರೆ ಜಮೀನುಗಳಲ್ಲಿ ಧಾನ್ಯವನ್ನು ಬೆಳೆಯುತ್ತಾರೆ. ನದಿಗಳ ನಾಲೆಗಳ ಕೆಳಗೆ ಇರುವ ಜಮೀನುಗಳಲ್ಲಿಯೂ, ಕೆರೆಗಳ ಆಚ್ಚುಕಟ್ಟು ಜಮೀನುಗಳಲ್ಲಿಯೂ, ಹೇರಳವಾಗಿ ಮಳೆಯ ನೀರಿನ ವನತಿಯುಳ್ಳ ಮಲೆನಾಡಿನ ಜಮೀನುಗಳಲ್ಲಿಯೂ, ಧಾನ್ಯವನ್ನು ಬೆಳೆಯುತ್ತಾರೆ.

ನಾಮಾನ್ಯವಾಗಿ ಕೆರೆಗಳ ಆಚ್ಚುಕಟ್ಟು ಜಮೀನುಗಳಲ್ಲಿಯೂ, ಮಲೆನಾಡು ಪ್ರಾಂತ್ಯದಲ್ಲಿಯೂ ದಪ್ಪ ಧಾನ್ಯವನ್ನು ಬೆಳೆಯುತ್ತಾರೆ. ಈ ಧಾನ್ಯವು ಕುಸುಬಲ ಅಕ್ಕಿಯನ್ನು ತಯಾರುಮಾಡಲು ಉಪಯೋಗಿಸುತ್ತಾರೆ. ಕಾಲುವೆಗಳ ಕೆಳಗೆ ಇರುವ ಜಮೀನುಗಳಲ್ಲಿ ಬೆಳೆಯುವ ಧಾನ್ಯಗಳಲ್ಲಿ ಕಡ್ಡಿ, ಕೆಂಬೂತಿ, ಪಟ್ಟ ಸೋಮನಹಳ್ಳಿ ನಣ್ಣ, ಕೊಯಂಬತ್ತೂರು ನಣ್ಣ ಎಂಬ ಜಾತಿ ಇವುಗಳು ಕೆಲವು ಮುಖ್ಯವಾದವುಗಳು. ಮಲೆನಾಡು ಪ್ರಾಂತ್ಯ ಬೆಳೆಯುವ ಜಾತಿಗಳಲ್ಲಿ ಹಸದಿ, ಜಡ್ಡು, ವಾಲ್ಸ, ತಗರಿಣ ಮತ್ತು ದಬ್ಬಣನಾರೆ ಎಂಬುವು ಮುಖ್ಯವಾದುವು. ಕೆರೆಗಳ ಆನರೆಯ ಆಚ್ಚುಕಟ್ಟು ಜಮೀನುಗಳಲ್ಲಿ ಮರಳುಕಾಂತಿ, ದೋಳುಮಲ್ಲಿಗೆ, ಆಲೂರುನಣ್ಣ, ಎಂಬ ಕೆಲವು ಜಾತಿಯ ಧಾನ್ಯವನ್ನು ಬೆಳೆಯುತ್ತಾರೆ. ಎಲ್ಲಾ ವಿಧವಾದ ಧಾನ್ಯಗಳಿಗಿಂತಲೂ ಕೊಯಂಬತ್ತೂರು ನಣ್ಣವೆಂಬ ಜಾತಿಯ ಧಾನ್ಯವನ್ನು ಹೇರಳವಾಗಿ ಬೆಳೆಯುತ್ತಾರೆ. ಮಲೆನಾಡು ಪ್ರಾಂತ್ಯದಲ್ಲಿಯೂ ಕೂಡ ಈ ಜಾತಿಯ ಧಾನ್ಯವನ್ನು ಈಚೆಗೆ ಹೇರಳವಾಗಿ ಬೆಳೆಯುತ್ತಾರೆ. ಏತಕ್ಕೆಂದರೆ ಈ ಜಾತಿ ಧಾನ್ಯದ ಕಾಳುಗಳು, ನಣ್ಣದಾಗಿಯೂ ಅಲ್ಲದೆ ಮಿಲ್ಲಿನಲ್ಲಿ ಉತ್ತಮ ರೀತಿಯಾಗಿ ಪಾಲಿಷ್ ಮಾಡಲ್ಪಡಲು ಯೋಗ್ಯವಾಗಿಯೂ ಇರುತ್ತದೆ.

ಸುಗ್ಗಿಯಾದೊಡನೆ ಕೆಲವರು ತಮಗೆ ಬೇಕಾದಷ್ಟು ಧಾನ್ಯವನ್ನು ಮನೆಯಲ್ಲಿ ದಾಸ್ತಾನುಮಾಡಿ ತಮಗೆ ಬೇಕಾದ ಹಾಗೆಲ್ಲಾ ಮನೆಯಲ್ಲಿ ಬಳಕೆಗಾಗಿ ಸ್ವಲ್ಪ ಸ್ವಲ್ಪ ಈ ಕೆಳಗೆ ಚಿತ್ರಗಳಲ್ಲಿ ಕಾಣಿಸಿರುವ ಮೂರು ಬಗೆಯ ಯಾವದಾದರೊಂದು ರೂಢಿಯಲ್ಲಿರುವ ಕೊಟ್ಟಗಳಲ್ಲಿ ತಮಗೆ ಅನುಕೂಲವಾಗಿರುವ ರೀತಿಯಲ್ಲಿ ಅಕ್ಕಿಯನ್ನು ಮಾಡಿಕೊಳ್ಳುತ್ತಾರೆ. ಈ ರೀತಿಯಾಗಿ ಅಕ್ಕಿಯನ್ನು ಮಾಡಿಕೊಳ್ಳುವಾಗ ಧಾನ್ಯದ ಹೊಟ್ಟು ಕಳೆದು, ಅಕ್ಕಿಕಾಳಿನ ಮೇಲಿರುವ ತೆಳುವಾದ ಪೊರೆಯು ಸ್ವಲ್ಪ ಭಾಗ ಮಾತ್ರ ಹೋಗಿ, ಕಾಳು ಮತ್ತು ಅದರ ಮೇಲಿನ ಇತರ ಪೊರೆಗಳು ಹಾಗೆಯೇ ಇದ್ದು ಆಹಾರಕ್ಕೆ ಯೋಗ್ಯವಾಗಿರುತ್ತದೆ.

ಆದರೆ ಈಗಿನ ಕಾಲದಲ್ಲಿ ಸುಗ್ಗಿಯಾದವಡನೆಯೇ ಧಾನ್ಯವೆಲ್ಲಾ ವಿಶೇಷವಾಗಿ ಮಿಲ್ಲುಗಳಲ್ಲಿ ಅಕ್ಕಿ ಮಾಡಲ್ಪಟ್ಟು ಮಾರಾಟಕ್ಕೆ ಬರುವುದು. ಈ ರೀತಿಯಾಗಿ ಮಿಲ್ಲಿನಲ್ಲಿ ಹೊಟ್ಟು ತೆಗೆದು ಹೆಚ್ಚಾಗಿ ಪಾಲಿಷ್ ಮಾಡಿದ ಅಕ್ಕಿಯನ್ನೇ ಗ್ರಾಮಾಂತರಗಳಲ್ಲಿಯೂ ಮತ್ತು ಪಟ್ಟಣಗಳಲ್ಲಿಯೂ ಉಪಯೋಗಿಸುವ ವಾಡಿಕೆಯಾಗಿರುತ್ತದೆ.

ಮೇಲಿನ ಹೊಟ್ಟು ಮಾತ್ರ ತೆಗೆದ ಧತ್ತದಕಾಳು (ಅಕ್ಕಿ) ಈ ಕೆಳಗೆ ಕಂಡ ಚಿತ್ರದಲ್ಲಿ ಕಾಣಿಸಿರುವಂತೆ ನಾಲ್ಕು ಭಾಗಗಳನ್ನು ಒಳಗೊಂಡಿರುತ್ತದೆ.



A. (a) ಇದು ಕಾಳಿನ ಮೊಳಕೆ. ಇದರಿಂದಲೇ ನಾಟಿದ ಮೇಲೆ ಮೊಳಕೆ ಬರುವುದು. ಇದರಲ್ಲಿ— ಅನ್ನಾಂಗಗಳೂ ಖನಿಜ ಸಂಬಂಧವಾದ ಲವಣಗಳೂ ಇರುತ್ತವೆ. ಮೇಲಿನ ತೆಳುವಾದ ಪೊರೆ ಮತ್ತು ಕೆಳಗಣ ಪೊರೆಗಳಲ್ಲಿ ಮುಖ್ಯವಾಗಿ ಎರ್ಡಾ ವಿಧವಾದ ಖನಿಜ ವಸ್ತುಗಳೂ ಮತ್ತು ಮಾಂಸಖಂಡಗಳ ಬೆಳವಣಿಗೆಗೆ ಬೇಕಾದ ವಸ್ತುಗಳೂ ಸಹ ಇರುತ್ತವೆ.

(b) ಇದು ಕಾಳಿನ ಮುಖ್ಯ ಭಾಗ.ಇದರಲ್ಲಿ ಪಿಷ್ಟಾಂಶದ ಹರಳುಗಳು ತುಂಬಿರುತ್ತವೆ.

(c) ಇದು ಮಧ್ಯಭಾಗದ ಸಣ್ಣ ಪೊರೆ. ಇದರಲ್ಲಿ ಮೇದಸ್ಸು ಮತ್ತು ಕಾಳಿನಲ್ಲಿರುವ ಅಧಿಕ ಭಾಗ ಸಸಾರಜನಕ ಪದಾರ್ಥ ಇರುತ್ತವೆ.

(d) ಇದು ಹೊರಭಾಗದ ತೆಳುವಾದ ಪೊರೆ. ಇದರ ಬಣ್ಣವು ಮಾಸಲು ಬಿಳುಪಿನಿಂದ ಹಿಡಿದು, ಹಳದಿ, ಹಳದಿ ಮಿಶ್ರವಾದ ಕೆಂಪು ಮುಂತಾದುವುಗಳಾಗಿ ಒಂದೊಂದು ಜಾತಿ ಧತ್ತದಲ್ಲಿ ಒಂದೊಂದು ವಿಧವಾಗಿರುತ್ತದೆ.

B. ಮಿಲ್ಲಿನಲ್ಲಿ ಪಾಲಿಷ್ ಮಾಡಿದ ಅಕ್ಕಿಕಾಳಿನಲ್ಲಿ "A" ಚಿತ್ರದ (b) ಭಾಗದಲ್ಲಿ ಸೂಚಿಸಿರುವಂತೆ ಪಿಷ್ಟಾಂಶದ ಹರಳುಗಳೇ ಹೇರಳವಾಗಿರುತ್ತವೆ.



ಮಿಲ್ಲಿಂಗ್ ಯಂತ್ರ.

ಮಿಲ್ಲಿನಲ್ಲಿ ಧತ್ತವನ್ನು ಹಾಕಿ ಅಕ್ಕಿ ಮಾಡುವಾಗ ಮತ್ತು ಪಾಲಿಷ್ ಮಾಡುವಾಗ ಕಾಳಿನ ಸಣ್ಣ ಪೊರೆ, ಮಧ್ಯಭಾಗದ ಪೊರೆ ಮತ್ತು ಮೊಳಕೆ ಇವುಗಳು ನಶಿಸಿ ಹೋಗಿ ತೌಡಿನಲ್ಲಿ ಬೆರೆದು ಹೋಗಿಬಿಡುವುದು. ಪಾಲಿಷ್ ಮಾಡಿದ ಹಾಗೆಲ್ಲಾ ಇವು ಹೆಚ್ಚಾಗಿ ನಶಿಸಿ ಹೋಗಿಬಿಡುವುದು. ಇದರ ಪರಿಣಾಮವಾಗಿ ದೇಹ ಪುಷ್ಟಿಗೆ ಸಹಕಾರಿಗಳಾದ ಅಮೂಲ್ಯ ವಸ್ತುಗಳು ನಾಶವಾಗುವುವು. ಮಿಲ್ಲಿನಲ್ಲಿ ಹೆಚ್ಚಾಗಿ ಪಾಲಿಷ್ ಮಾಡಿದ ಅಕ್ಕಿಯು ಬಿಳೀ ಬಣ್ಣವುಳ್ಳದ್ದಾಗಿರುವುದು. ಆದರೆ ಸ್ವಲ್ಪ ಮಾತ್ರ ಪಾಲಿಷ್ ಮಾಡಿದ ಅಕ್ಕಿಯಾಗಲೀ, ಕುಸಬಲ ಅಕ್ಕಿಯಾಗಲೀ, ಅಥವಾ ಕೈ ಕೊಟ್ಟಣದಿಂದ ಕುಟ್ಟಿದ ಅಕ್ಕಿಯಾಗಲೀ ಮಾಸಲು ಬಿಳುಪಾಗಿರುತ್ತದೆ.

ಈ ರೀತಿಯಾಗಿ ಮಿಲ್ಲಿನಲ್ಲಿ ತಯಾರಾದ ಪಾಲಿಷ್ ಮಾಡಿದ ಅಕ್ಕಿಯನ್ನು ಉಪಯೋಗಿಸುವುದರಿಂದ ಅನಾರೋಗ್ಯಕ್ಕೆ ಕಾರಣವಾಗುವುದು, ಮಕ್ಕಳ ಬೆಳವಣಿಗೆಗೆ ಕುಂದುಂಟಾಗುವುದು. ಹೆಚ್ಚಾಗಿ ಪಾಲಿಷ್ ಮಾಡಿದ ಅಕ್ಕಿಯ ಉಪಯೋಗದಿಂದ "ಬೆರಿ–ಬೆರಿ" ಎಂಬ ಖಾಯಿಲೆಗೆ ಕಾರಣವಾಗುವುದು. ಈ ಬಗೆಯ ಖಾಯಿಲೆಯು ಹೆಚ್ಚಾಗಿ ಇಲ್ಲದಿದ್ದರೂ ಕೂಡ, ಜನಗಳಲ್ಲಿ ಉಂಟಾಗುವ ಒಂದು ಬಗೆಯ ಆಯಾಸ, ಹಸಿವು ಇಲ್ಲದಿರುವಿಕೆ, ಗೊತ್ತು ಗುರಿಯಿಲ್ಲದ ಅನೇಕ ನೋವುಗಳೂ ಮತ್ತು ದೇಹದ ತೂಕವು ಕುಗ್ಗಿರುವಿಕೆ ಮುಂತಾದುವುಗಳೂ ಸಹ ಮುಖ್ಯ ಸತ್ವಾಂಶಗಳಿಂದ ರಹಿತವಾದ ಅಕ್ಕಿಯ ಉಪಯೋಗವೇ ಕಾರಣ.

ಆರೋಗ್ಯ ಇಲಾಖೆಯವರು ಕೈಗೊಂಡ ಪರೀಕ್ಷೆಯಲ್ಲಿ ಕಂಡುಬಂದಿರುವ ಅಂಶವೇನೆಂದರೆ:—ಕೈ ಕೊಟ್ಟಣದ ಅಕ್ಕಿಯಿಂದ ಸಾಕಿದ ಪಾರಿವಾಳಗಳು ಮೊದಲಗಿಂತಲೂ ತೂಕದಲ್ಲಿ ಹೆಚ್ಚು ಆರೋಗ್ಯವಾಗಿ

ದೆಳೆದವು. ಪೇಚೆಯಲ್ಲಿ ಮಾರುವ ಮಿಲ್ಲಿನಲ್ಲಿ ಪಾಲಷ್ ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳು ಮೊದ ಲಿಗಿಂತಲೂ ತೂಕದಲ್ಲಿ ಕಮ್ಮಿಯಾಗಿ "ದೆರಿ-ದೆರಿ" ಎಂಬ ಖಾಯಿಲೆ ಪ್ರಾಪ್ತವಾಗಿ ಸಾಯುವ ಚಿಹ್ನೆಗಳು ಕಂಡುಬಂದುವು.



ಪಾಲಷಿಂಗ್ ಯಂತ್ರ.

ಕೈ ಕೊಟ್ಟದ ಅಕ್ಕಿಯಿಂದ ಸಾಕಿದ ಪಾರಿವಾಳಗಳಲ್ಲಿಯೂ ಮತ್ತು ಸರ್ವೆ ಸಾಮಾನ್ಯವಾದ ಕೊಯಂ ಬ್ತೂರು ಸಣ್ಣ ಜಾತಿಯಲ್ಲಿ ವಿವಿಧ ದರ್ಜೆ ಪಾಲಷ್ ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳಲ್ಲೂ ಈ ಕೆಳಗೆ ಸೂಚಿಸಿರುವಂತೆ ಫಲಿತಾಂಶಗಳು ಕಂಡುಬಂದುವು :—

(a) ಕೈ ಕೊಟ್ಟದ ಅಕ್ಕಿಯಿಂದ ಸಾಕಿದ ಪಾರಿವಾಳಗಳು. — ತೂಕ ಹೆಚ್ಚುವುದರಲ್ಲಿ ಬಹುಸಮರ್ಪಕವಾಗಿದ್ದುವು.

(b) ಮಿಲ್ಲಿನಲ್ಲಿ ಪಾಲಷ್ ಮಾಡಿದ ಹೊಟ್ಟು ಮಾತ್ರ ತೆಗೆದ ಅಕ್ಕಿಯಿಂದ ಸಾಕಿದ ಪಾರಿವಾಳಗಳು. — ತೂಕ ಹೆಚ್ಚುವುದರಲ್ಲಿ—ಸಮರ್ಪಕವಾಗಿದ್ದುವು.

(c) ಮಿಲ್ಲಿನಲ್ಲಿ ಶೇಕಡ 25ರಷ್ಟು ಮಾತ್ರ ಪಾಲಷ್ ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳು. — ತೂಕದಲ್ಲಿ ಹೆಚ್ಚಿ ಸಮರ್ಪಕವಾಗಿದ್ದುವು. ಆದರೆ ಒಂದು ಮಾತ್ರ 7ನೆ ವಾರದ ಆಖೈರಿನಲ್ಲಿ ಸತ್ತು ಹೋಯಿತು.

(d) ಮಿಲ್ಲಿನಲ್ಲಿ ಶೇಕಡ 50ರಷ್ಟು ಪಾಲಿಷ್ ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳು. — ತೂಕದಲ್ಲಿ ಹೆಚ್ಚಿದ್ದುವು. ಆದರೆ ಎರಡು ಪಾರಿವಾಳಗಳು 5ನೆ ಮತ್ತು 8ನೆ ವಾರಗಳಲ್ಲಿ ಸತ್ತು ಹೋದುವು.

(e) ಮಿಲ್ಲಿನಲ್ಲಿ 100ಕ್ಕೆ 100ರಷ್ಟು ಪಾಲಿಷ್ ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳು. — ಎಲ್ಲವೂ ಆದಿಯಿಂದಲೂ ಕ್ರಮೇಣ ತೂಕದಲ್ಲಿ ಕಮ್ಮಿಯಾಗಿ "ಬೆರಿ-ಬೆರಿ" ಖಾಯಿಲೆಯಿಂದ 3ನೆ ಮತ್ತು 8ನೆ ವಾರಗಳಲ್ಲಿ ಸತ್ತುಹೋದುವು.

ಬಜಾರಿನಲ್ಲಿ ಮಾರಲ್ಪಡುತ್ತಿರುವ ಬೆಳ್ಳಗಿರುವ ಅಕ್ಕಿಯು 100ಕ್ಕೆ 100ರಷ್ಟು ಪಾಲಿಷ್ ಮಾಡಿದ್ದಾಗಿರುತ್ತದೆ.

ಹೀಗಿರುವಾಗ ನಾವೆಲ್ಲರೂ ಏತಕ್ಕಾಗಿ ಮೇಲ್ಕಂಡ ಖಾಯಿಲೆಗಳಿಂದ ನರಳುತ್ತಿರುವುದಿಲ್ಲ ಎಂಬ ಪ್ರಶ್ನೆಯು ಬರಬಹುದು. ಆದರೆ ಇದಕ್ಕೆ ಉತ್ತರ ನಾವೆಲ್ಲರೂ ಕೇವಲ ಅಕ್ಕಿಯೊಂದನ್ನೇ ಉಪಯೋಗಿಸದೆ ಜೊತೆಗೆ ಬೇಳೆ, ಹಾಲು, ಮೊಸರು, ತರಕಾರಿಗಳನ್ನೂ ಮತ್ತು ಮಾಂಸಾಹಾರಿಗಳು ವಾರಕ್ಕೆ ಒಂದಾವರ್ತಿ. ಅಥವ ಎರಡಾವರ್ತಿ ಮಾಂಸ ಮುಂತಾದುವುಗಳನ್ನು ಉಪಯೋಗಿಸುತ್ತಿರುತ್ತೇವೆ. ಕೊಂಚಮಟ್ಟಿಗೆ ಈ ಪದಾರ್ಥಗಳಲ್ಲಿ ಖಾಯಿಲೆಗಳನ್ನು ತಡೆಯುವ ಅಥವಾ ಖಾಯಿಲೆಗಳ ಉಲ್ಬಣವನ್ನೇ ಕಮ್ಮಿ ಮಾಡುವ ವಸ್ತು ವಿಶೇಷಗಳು ಇರುತ್ತವೆ.

ಬೀಸೋ ಪೊರ.

ಅಡಿಗೆ ಮಾಡುವ ವಿಧಾನ.—ಸಾಮಾನ್ಯವಾಗಿ ಜನರಿಗೆ ಅಡಿಗೆ ಮಾಡಿದ ಮೇಲೆ ಅನ್ನವು ಬೆಳ್ಳಗೆ ಶುಭ್ರವಾಗಿಯೂ, ಸಣ್ಣ ಅಕ್ಕಿಯ ಅನ್ನವಾಗಿಯೂ, ರುಚಿಯಾಗಿ ಇದ್ದಲ್ಲಿ ಹರುಷವಾಗಿರುತ್ತದೆ. ಅಕ್ಕಿಯನ್ನು

ಅನೇಕ ಸಾರಿ ಚೆನ್ನಾಗಿ ತೊಳೆದು ಕಲ್ಗಚ್ಚನ್ನು ಚೆಲ್ಲಿ ಅನ್ನ ಮಾಡುವುದು ವಾಡಿಕೆಯಾಗಿರುತ್ತದೆ. ಅಲ್ಲದೆ ಅನ್ನವಾದ ಮೇಲೆ ಗಂಜಿಯನ್ನು ಸಹ ಬಸಿದು ಹಾಕುವ ವಾಡಿಕೆಯುಂಟು. ಹೀಗೆ ಮಾಡುವುದರಿಂದ ಅಲ್ಪ ಸ್ವಲ್ಪ ಇರತಕ್ಕ ಅನ್ನಾಂಗಗಳೂ ಸಹ ಬಿಸಾಡಲ್ಪಡುವುವು. ಅನ್ನವು ಮಾತ್ರ ಕಣ್ಣಿಗೆ ರಮ್ಯವಾಗಿ ಇರುವುದೇ ಮನಷ್ಯ ನತ್ಯವನ್ನು ಒಳಗೊಂಡು ಇರುವುದಿಲ್ಲ. ಕುಸುಬಲ ಅಕ್ಕಿಯನ್ನು ತೊಳೆಯುವುದರಿಂದಲಾಗಲೀ ಅಥವಾ ಗಂಜಿಯನ್ನೇ ಬಸಿದುದರಿಂದಾಗಲೀ ಹೇರಳವಾಗಿ ಅನ್ನಾಂಗವು ನಾಶವಾಗುವುದಿಲ್ಲ. ಅನ್ನವು ಮಾತ್ರ ಕಣ್ಣಿಗೆ ರಮ್ಯವಾಗಿರುವುದಿಲ್ಲ. ಅಲ್ಲದೆ ಈ ಅಕ್ಕಿ ಅನ್ನವು ಪೊಗ್ಗಿದವರಿಗೆ ಮಾತ್ರ ರುಚಿಸುವುದು.

ಕೊಟ್ಟಣ.

ಕೈ ಕೊಟ್ಟಣದ ಅಕ್ಕಿಯೂ, ಕುನಬಲ ಅಕ್ಕಿಯೂ ಮತ್ತು ಹೊಟ್ಟು ಮಾತ್ರ ತೆಗೆದ ಅಕ್ಕಿಯೂ ದೇಹಾರೋಗ್ಯಕ್ಕೆ ಉತ್ಕೃಷ್ಟವಾದುವುಗಳು. ಹೆಚ್ಚಾಗಿ ಮಿಲ್ಲಿನಲ್ಲಿ ಪಾಲಿಷ್ ಮಾಡಿದ ಅಕ್ಕಿಗಿಂತಲೂ ಸುಮಾರಾಗಿ ಪಾಲಿಷ್ ಮಾಡಿದ ಅಕ್ಕಿಯೇ ಉತ್ತಮವಾದುದು. ಆದುದರಿಂದ ಜನರು ಕಣ್ಣಿಗೆ ರಮ್ಯವಾಗಿ ಶೋಭಿಸುವ ನವೀನ ವಾಡಿಕೆಗಳಿಗೆ ವಿರಗಾಗದೆ ದೇಹಾರೋಗ್ಯಕ್ಕೆ ಸಹಕಾರಿಯಾದ ಮಾರ್ಗವನ್ನವಲಂಬಿಸಿ, ಸಂಸಾರದ ಉಪಯೋಗಕ್ಕಾಗಿ ಕೈ ಕೊಟ್ಟಣದ ಅಕ್ಕಿಯನ್ನಾಗಲೀ ಅಥವಾ ಕುಸುಬಲ ಅಕ್ಕಿಯನ್ನಾಗಲ ಅಥವಾ ಮಿಲ್ಲಿನಲ್ಲಿ ಪಾಲಿಷ್ ಮಾಡದೇ ಇರುವ ಅಕ್ಕಿಯನ್ನಾಗಲೀ ಒದಗಿಸಿಕೊಳ್ಳಬೇಕು. ಮಿಲ್ಲಿನಲ್ಲಿ ಪಾಲಿಷ್ ಮಾಡಿದ ಅಕ್ಕಿಯನ್ನು ತ್ಯಜಿಸಬೇಕು.



ಏತ.

ಒಳ್ಳೆ ಸತ್ವವುಳ್ಳ ಆಹಾರಕ್ಕಾಗಿ ಈ ಕೆಳಗೆ ಕಂಡ ಅಕ್ಕಿಗಳಲ್ಲಿ ಯಾವುದನ್ನಾದರೂ ಉಪಯೋಗಿಸಿ :—

I. ಕುಸುಬಲ ಅಕ್ಕಿ ಅನ್ನವನ್ನು ಊಟಮಾಡುವ ಅಧ್ಯಾಸವು ಪೋಗ್ಗಿಹೋಗಿದ್ದರೆ ಕುಸುಬಲ ಅಕ್ಕಿಯನ್ನೇ ಉಪಯೋಗಿಸಬಹುದು.

II. ಸಾಧಾರಣ ಅಕ್ಕಿಯನ್ನು ಉಪಯೋಗಿಸುವವರು ಈ ಕೆಳಗೆ ವಿವರಿಸಿರುವ ಅಕ್ಕಿಯನ್ನು ಉಪಯೋಗಿಸಬೇಕು :—

(i) ಕೊಟ್ಟಣದಿಂದಾಗಲೀ, ಏತದಿಂದಾಗಲೀ ಅಥವಾ ಬೀಸುವ ಮರದಿಂದಾಗಲೀ ಮಾಡಿದ ಅಕ್ಕಿಯನ್ನು ಉಪಯೋಗಿಸಬಹುದು.

(ii) ಮೇಲ್ಕಂಡ ರೀತಿಯಿಂದ ಮಾಡಿದ ಅಕ್ಕಿಯು ದೊರೆಯದೇಹೋದಲ್ಲಿ ಧತ್ತದ ಹೊಟ್ಟು ಮಾತ್ರ ತೆಗೆದ ಅಕ್ಕಿಯನ್ನು ಕೊಂಡುಕೊಂಡು ಮನೆಯಲ್ಲಿ ಬಣ್ಣಹೋಗದಂತೆ ಸ್ವಲ್ಪ ಕುಟ್ಟಿ ಉಪಯೋಗಿಸಬಹುದು. ಹೀಗೆ ಮನೆಯಲ್ಲಿ ಕುಟ್ಟಿದ ಅಕ್ಕಿಯ ಅನ್ನವು ಮುದ್ದೆಯಾಗದೆ, ನೋಡಲು ಚೆನ್ನಾಗಿರುವುದು.

(iii) ಅನ್ನವನ್ನು ಮಾಡುವುದಕ್ಕೆ ಮುಂಚೆ ಅಕ್ಕಿಯನ್ನು ತೊಳೆಯುವಾಗ ನಾಜೂಕಾಗಿ ಮೂರು ಬಾರಿಗೆ ಮಿಾರದಂತೆ ತೊಳೆಯುವುದೂ ಗಂಜೀ ಬಸಿಯದೇನೇ ಅನ್ನಮಾಡುವುದೂ ಉತ್ತಮ. ದಯವಿಟ್ಟು ಏನೇ ಆಗಲಿ ಬಜಾರಿನಲ್ಲಿ ಸಿಕ್ಕುವ ಬೆಳ್ಳಗಿರುವ, ಹೆಚ್ಚಾಗಿ ಪಾಲಿಷ್ ಮಾಡಿದ ನೋಟಕ್ಕೆ ಸೊಗಸಿನ ಅಕ್ಕಿಯನ್ನು ಮಾತ್ರ ಊಟಕ್ಕೆ ಉಪಯೋಗಿಸ ಬಾರದು.

WD 1306—GPB—2,000—26-6-39

THE

MYSORE STATE DEPARTMENT OF PUBLIC HEALTH

ಮೈಸೂರು ಜನಾರೋಗ್ಯ ರಕ್ಷಣೆಯ ಇಲಾಖೆ

LEPROSY AND ITS CONTROL IN INDIA

ಇಂಡಿಯಾದೇಶದಲ್ಲಿ ಕುಷ್ಠರೋಗದ ವ್ಯಾಪ್ತಿ ಮತ್ತು ಅದರ ಹತೋಟಿ.

BUREAU OF HEALTH EDUCATION

ಆರೋಗ್ಯ ತತ್ವಪ್ರಚಾರ ಶಾಖೆ

ಬೆಂಗಳೂರು:
ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು.
೧೯೪೩

ಇಂಡಿಯಾ ದೇಶದಲ್ಲಿ ಕುಷ್ಠರೋಗದ ವ್ಯಾಪ್ತಿಯನ್ನೂ ಮತ್ತು ಕುಷ್ಠರೋಗವನ್ನು ಹತೋಟಿಯಲ್ಲಿಡುವ ಕಾರ್ಯಕ್ರಮವನ್ನೂ ಕುರಿತು ಇಂಡಿಯಾ ಸರ್ಕಾರದ "ಸೆಂಟ್ರಲ್ ಅಡ್ವೈಜರಿ ಬೋಡ್ರ್ ಆಫ್ ಹೆಲ್ತ್" ಸಂಸ್ಥೆಯವರು ನೇಮಕಮಾಡಿದ್ದ ಸಮಿತಿಯವರು ಒಪ್ಪಿಸಿದ ವರದಿಯ ಸಾರಾಂಶ.

1. ಪೂರ್ವವೃತ್ತಾಂತ.

ಕುಷ್ಠರೋಗವು ಭರತಖಂಡದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಕಂಡು ಬಂದಿರುವ ಪ್ರಬಲವ್ಯಾಧಿ. ಕಳೆದ ಒಂದು ಶತಮಾನದಿಂದ ಈಚೆಗೆ ಈ ವ್ಯಾಧಿಯನ್ನು ಹತೋಟಿಗೆ ತರತಕ್ಕ ಕಾರ್ಯಕ್ರಮಗಳನ್ನು ಮುಖ್ಯವಾಗಿ ಖಾಸಗಿ ಸಂಸ್ಥೆಗಳವರೇ ನಡೆಯಿಸುತ್ತ ಬಂದಿದ್ದಾರೆ ಅವಕ್ಕಾಗಿ, ಕುಷ್ಠರೋಗಿಗಳ ಗೋಸ್ಕರ ರಕ್ಷಣಾಲಯಗಳನ್ನು ಸ್ಥಾಪಿಸಿ ನೋಡಿಕೊಳ್ಳುತ್ತಿದ್ದಾರೆ. ಅವುಗಳ ಸಂಖ್ಯೆ ಈಗ್ಗೆ ಅರವತ್ತು ವರ್ಷಗಳಿಂದ ಬಹಳ ಬೇಗ ಬೇಗ ಹೆಚ್ಚಿದೆ. ಇಂಡಿಯಾ ದೇಶದಲ್ಲಿ ಈಗ ಸುಮಾರು 95 ಕುಷ್ಠರೋಗಿಗಳ ರಕ್ಷಣಾಲಯಗಳಿವೆ. ಅವುಗಳಲ್ಲಿ ಒಟ್ಟು 14,000 ಜನ ಕುಷ್ಠರೋಗಿಗಳು ರಕ್ಷಣೆ ಪಡೆಯುತ್ತಿದ್ದಾರೆ. 1925ನೆಯ ಇಸವಿಯಲ್ಲಿ ಲಾರ್ಡ್ ರೀಡಿಂಗ್‌ರವರು ತಮ್ಮ ವೈಸರಾಯಿ ಪದವಿಯ ಕಾಲದಲ್ಲಿ ಕುಷ್ಠರೋಗದ ನಿವಾರಣೆಯ ಕಾರ್ಯದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿದರು. ಅದಕ್ಕಾಗಿ 20 ಲಕ್ಷಕ್ಕಿಂತ ಹೆಚ್ಚು ಹಣವನ್ನು ಸಂಗ್ರಹಿಸಿ, ನಾನಾ ಸಂಶೋಧನಗಳೂ, ಪ್ರಯೋಗ ಪರೀಕ್ಷೆಗಳೂ ನಡೆಯುವಂತೆ ವ್ಯವಸ್ಥೆ ಮಾಡಿದರು. ಭರತ ಖಂಡದ ಯಾವ ಯಾವ ಪ್ರದೇಶದಲ್ಲಿ ಈ ರೋಗವು ಎಷ್ಟೆಷ್ಟು ಮಟ್ಟಿಗಿದೆ ಯೆಂಬ "ಸರ್ವೇಪರಿಶೀಲನೆ" ನಡೆಯುವ ಏರ್ಪಾಡೂ ಆಯಿತು. ಕುಷ್ಠರೋಗ ಅಂಟು ರೋಗವೆಂದೂ, ಅದು ತಗಲಿದವರಿಗೆ ಸರಿಯಾದ ಚಿಕಿತ್ಸೆಗೆ ಏರ್ಪಾಡು ಮಾಡುವ ಮೂಲಕ ಕುಷ್ಠರೋಗವನ್ನು ಹತೋಟಿಗೆ ತರಬಹುದೆಂದೂ, ಕುಷ್ಠರೋಗಿಗಳನ್ನು ಪ್ರತ್ಯೇಕವಾಗಿಟ್ಟು ಇತರರಿಗೆ ಅವರ ಸಂಪರ್ಕವನ್ನು ತಪ್ಪಿಸುವುದಾದರೆ ರೋಗ ಹರಡುವುದನ್ನು ಕಡಮೆ ಮಾಡಬಹುದೆಂದೂ ಈಗ ನಿರ್ಧರವಾಗಿ ಗೊತ್ತಾಗಿದೆ.

2. ಕುಷ್ಠರೋಗ ಹರಡುವ ವಿಚಾರ ಮತ್ತು ಅದರ ಹತೋಟಿ.

ಕುಷ್ಠರೋಗವು ಅಂಟುರೋಗವೆಂದೇನೋ ಈಗ ನಿರ್ಧರವಾಗಿದೆ. ಆದರೆ, ಕುಷ್ಠರೋಗವಿರುವವರೆಲ್ಲರಿಂದಲೂ ಇತರರಿಗೆ ಅದು ತಗಲುವುದಿಲ್ಲ. ಸಾಮಾನ್ಯವಾಗಿ ಕುಷ್ಠರೋಗಿಗಳೊಡನೆ ಸೇರಿರುವವರ ವಯಸ್ಸಿಗೂ ಮತ್ತು ಹಾಗೆ ಸೇರಿರುವ ಅವಧಿಗೂ ಅನುಸಾರವಾಗಿ ಕುಷ್ಠರೋಗ ತಗಲುತ್ತದೆ. ಕೆಲವು ಜನರಿಗೂ, ಕೆಲವು ಕುಟುಂಬಗಳಿಗೆ ಸೇರಿದವರಿಗೂ ಮತ್ತು ಕೆಲವು ಬಿಡಕಟ್ಟುಗಳಿಗೆ ಸೇರಿದವರಿಗೂ ವಿಶೇಷವಾಗಿ ಈ ರೋಗ ತಗಲುವ ಸಂಭವಗಳೂ ಉಂಟು. ಕುಷ್ಠರೋಗವಿರತಕ್ಕವ

ರನ್ನು ಪರೀಕ್ಷಿಸಿ ನೋಡಿದುದರಲ್ಲಿ ಈ ಕೆಳಗೆ ಕಂಡ ಅಂಶಗಳು ತಿಳಿದುಬಂದುವು. ಅವು ಯಾವುವೆಂದರೆ .—

(i) ಕುಷ್ಠರೋಗಿಗಳಾದ ತಾಯಿ ತಂದೆಗಳ ಸಂಪರ್ಕವಿಲ್ಲದಂತೆ ಮಗುವನ್ನು ಹುಟ್ಟಿದಂದಿನಿಂದ ಪ್ರತ್ಯೇಕವಾಗಿಟ್ಟು ಪೋಷಿಸಿದ ಪಕ್ಷದಲ್ಲಿ ಆ ಮಗುವಿಗೆ ಕುಷ್ಠರೋಗವು ಬರುವುದಿಲ್ಲ. ಆದುದರಿಂದ ಕುಷ್ಠರೋಗವು ವಂಶಪರಂಪರಾಗತವಾದ ರೋಗವಲ್ಲ.

(ii) ಕುಷ್ಠರೋಗಿಗಳಾದ ತಾಯಿ ತಂದೆಗಳ ಸಂಪರ್ಕವಿಲ್ಲದಂತೆ ಪ್ರತ್ಯೇಕಿಸದೆ ಬೆಳೆದ ಮಕ್ಕಳಿಗೆ ಕುಷ್ಠರೋಗವು ಸಾಧಾರಣವಾಗಿ ಬಂದೇ ಬರುತ್ತದೆ. ಆದು ಬೇಗನೆ ಕಾಣಿಸಿಕೊಳ್ಳಬಹುದು ಅಥವಾ ಅನೇಕ ವರ್ಷಗಳ ಮೇಲೆ ಕಾಣಿಸಿಕೊಳ್ಳಬಹುದು.

(iii) ವಯಸ್ಕರಾದ ಜನರು ಕುಷ್ಠರೋಗಿಯ ಜೊತೆಯಲ್ಲಿದ್ದ ಪಕ್ಷದಲ್ಲಿ, ಉದಾಹರಣೆಗಾಗಿ, ಒಬ್ಬ ಹೆಂಗಸು ಕುಷ್ಠರೋಗಿಯಾದ ತನ್ನ ಗಂಡನ ಜೊತೆಯಲ್ಲಿದ್ದ ಪಕ್ಷದಲ್ಲಿ ಅವಳಿಗೂ, ಒಬ್ಬ ಗಂಡಸು ಕುಷ್ಠರೋಗಿಯಾದ ತನ್ನ ಹೆಂಡತಿಯ ಜೊತೆಯಲ್ಲಿದ್ದ ಪಕ್ಷದಲ್ಲಿ ಅವನಿಗೂ, ಕುಷ್ಠರೋಗ ಬರುವುದು ಬಹಳ ಕಡಮೆ.

ಬಹಳ ಕಾಲದವರೆಗೆ ಕುಷ್ಠರೋಗಿಗಳ ಜೊತೆಯಲ್ಲಿದ್ದರೆ ಕುಷ್ಠರೋಗ ಅಂಟುವುದು ಖಂಡಿತ. ಆಕಸ್ಮಿಕವಾಗಿ ಸ್ವಲ್ಪಕಾಲ ಜೊತೆಯಲ್ಲಿದ್ದರೆ ವಯಸ್ಕರಾದವರಿಗೆ ಈ ರೋಗ ಅಂಟುವುದು ತುಂಬ ಕಡಮೆ. ಆದರೆ ಮಕ್ಕಳಿಗೆ ಮಾತ್ರ ಆಕಸ್ಮಿಕವಾಗಿ ಸ್ವಲ್ಪಕಾಲ ಮಾತ್ರವೇ ಕುಷ್ಠರೋಗಿಗಳ ಸಂಪರ್ಕವುಂಟಾದರೂ ಕುಷ್ಠರೋಗ ತಗಲುವ ಸಂಭವ ಹೆಚ್ಚು.

3 ಇಂಡಿಯಾ ದೇಶದಲ್ಲಿ ಕುಷ್ಠರೋಗ ಎಷ್ಟುಮಟ್ಟಿಗೆ ಹರಡಿದೆಯೆಂಬ ವಿಚಾರ.

(1) ಸಾಮಾನ್ಯಾಂಶಗಳು—ಕುಷ್ಠರೋಗದ ವ್ಯಾಪ್ತಿ ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಧವಾಗಿರುತ್ತದೆ. ಜನಗಣತಿಯ (" ಸೆನ್ಸಸ್ ") ವಿವರಗಳಲ್ಲಿ ಆಯಾ ಪ್ರಾಂತದ ಕುಷ್ಠರೋಗಿಗಳ ಸಂಖ್ಯೆಯೇನೋ ನಮೂದಾಗಿರುತ್ತದೆ. ಆದರೆ ರೋಗ ತೀರ ಉಲ್ಬಣವಾಗಿರುವವರನ್ನು ಮಾತ್ರ ಆ ಎಣಿಕೆಯಲ್ಲಿ ಸೇರಿಸಿರುತ್ತಾರೆ. ರೋಗ ಆ ಸ್ಥಿತಿಗೆ ಬಾರದಿರುವ ಸಂಖ್ಯೆ ಅದರಲ್ಲಿ ಸೇರಿರುವುದಿಲ್ಲ. ಸರಿಯಾದ ಸಂದರ್ಭಗಳನ್ನು ವೈದ್ಯಶಾಸ್ತ್ರವನ್ನರಿಯದವರು ಗುರುತಿಸುವುದು ಸಾಧ್ಯವಿಲ್ಲವಾದಕಾರಣ ಅಂಥವುಗಳ ಸಂಖ್ಯೆ ಅವರಲ್ಲಿ ಸೇರಿರುವುದಿಲ್ಲ. ಆದಕಾರಣ ಸರಿಯಾದ " ಸರ್ವೇ " ಪರಿಶೀಲನೆಯಿಂದ ಹೊರಬಿದ್ದ ಕುಷ್ಠರೋಗಿಗಳ ಸಂಖ್ಯೆ ಪ್ರಜಾಗಣತಿಯ ಲೆಕ್ಕವಿವರಗಳ ಪ್ರಕಾರ ದೊರೆಯತಕ್ಕ ಸಂಖ್ಯೆಗಿಂತ ಎಂಟರಷ್ಟು ಹೆಚ್ಚಾಗಿರುತ್ತದೆ.

(2) ಭಿಕ್ಷುಕರಲ್ಲಿ ಕುಷ್ಠರೋಗ.—ಕುಷ್ಠರೋಗವು ಭಿಕ್ಷುಕರಲ್ಲಿ ಹೆಚ್ಚಾಗಿರುತ್ತದೆ. ಅವರು ಸ್ಥಳದಿಂದ ಸ್ಥಳಕ್ಕೆ ಹೋಗುತ್ತಾರೆ. ಅವರು ಯಾತ್ರಾಸ್ಥಳಗಳಿಗೂ; ಜಾತ್ರೆಗಳಿಗೂ ಹೋಗುತ್ತಾರೆ. ಈ ರೀತಿ ಅವರು ಜನಸಂದಣಿಗಳಲ್ಲಿ ಸೇರಿ ಈ ರೋಗವನ್ನು ಹರಡುತ್ತಾರೆ. ಕಲ್ಕತ್ತಾ ದೊಂಬಾಯಿ ಮುಂತಾದ ನಗರಗಳಲ್ಲಿ ಇದನ್ನು ತಪ್ಪಿಸುವುದಕ್ಕಾಗಿ ನಡೆದ ಏರ್ಪಾಡು ಸಫಲವಾಗಿಲ್ಲ. ಕುಷ್ಠರೋಗಿಗಳಾದ ಭಿಕ್ಷುಕರಲ್ಲಿ ಯಾರೂ ಈ ರೀತಿ ಸಂಚರಿಸಲು ಅವಕಾಶಕೊಡದೆ, ಅವರು ರಕ್ಷಣಾಲಯುಗಳಲ್ಲಿರುವಂತೆ ನಿರ್ಬಂಧಪಡಿಸುವ ವ್ಯವಸ್ಥೆ ನಡೆಯಬೇಕು. ರಕ್ಷಣಾಲಯಗಳಲ್ಲಿರದೆ

ತಪ್ಪಿದ ಕುಷ್ಠರೋಗಿಗಳಿಗೆ ಯಾರೂ ಭಿಕ್ಷಹಾಕಕೂಡದು. ಹೀಗಾದ ಹೊರತು ಭಿಕ್ಷುಕರಾದ ಕುಷ್ಠರೋಗಿಗಳಿಂದ ಕುಷ್ಠರೋಗ ಹರಡುವುದು ತಪ್ಪಲಾರದು. ಪ್ರತಿಯೊಂದು ಪ್ರಾಂತ್ಯದ ಜನರೂ ಇದನ್ನು ಗಮನಿಸಬೇಕು. ತಾವು ಬಿಡಿ ಬಿಡಿಯಾ ಕುಷ್ಠರೋಗಿಗಳಿಗೆ ಭಿಕ್ಷಹಾಕುವುದಕ್ಕೆ ಬದಲಾಗಿ ಕುಷ್ಠರೋಗಿಗಳ ರಕ್ಷಣಾಲಯಕ್ಕೇ ಸಹಾಯವನ್ನೊದಗಿಸಬೇಕು. ಹೀಗೆ ಮಾಡಿದರೆ, ಕುಷ್ಠರೋಗಿಗಳ ಸಂಚಾರ ತಪ್ಪಿಹೋಗುತ್ತದೆ. ಕುಷ್ಠರೋಗ ಹರಡುವುದು ನಿಲ್ಲುತ್ತದೆ.

(3) ಕಾರ್ಖಾನೆ ಕೆಲಸಗಾರರಲ್ಲಿ ಕುಷ್ಠರೋಗ.—ಇತ್ತೀಚೆಗೆ ಕೈಗಾರಿಕೆಗಳು ಬೆಳೆದಹಾಗೆಲ್ಲ ಕುಷ್ಠರೋಗವೂ ಹರಡುತ್ತಿದೆ. ಕೈಗಾರಿಕೆ ಕಾರ್ಖಾನೆಗಳಲ್ಲಿ ಕುಷ್ಠರೋಗಿಗಳು ಇತರರೊಡನೆ ಸೇರಿ ಕೆಲಸಮಾಡುವುದರಿಂದ ಹೀಗಾಗಿದೆ. ಕಾರ್ಖಾನೆಗಳ ಆಡಳಿತಗಾರರು ಕೆಲಸಗಾರರ ಆರೋಗ್ಯದಲ್ಲಿ ಆಸಕ್ತಿ ವಹಿಸಿ, ಕುಷ್ಠರೋಗಿಗಳು ಅವರೊಡನೆ ಸೇರದಂತೆ ತಪ್ಪಿಸಬೇಕು. ಕುಷ್ಠರೋಗಿಗಳಾದ ಕೆಲಸಗಾರರನ್ನೇ ಇತರರಿಂದ ಪ್ರತ್ಯೇಕವಾಗಿಟ್ಟು ಕೆಲಸಮಾಡಿಸುವುದು ಸಾಧ್ಯವಿದ್ದರೆ, ಅವರನ್ನು ಕೆಲಸಕ್ಕೆ ನೇಮಕ ಮಾಡಬಹುದು.

(4) ಕುಷ್ಠರೋಗವು ಹರಡುವುದಕ್ಕೆ ಬಡತನವೂ ದೊಡ್ಡ ಕಾರಣ.—ಇಂಡಿಯಾದೇಶದಲ್ಲಿ ಕುಷ್ಠರೋಗವು ಹೆಚ್ಚಾಗಿರುವುದಕ್ಕೆ ಜನರ ಬಡತನವೂ ಒಂದು ದೊಡ್ಡ ಕಾರಣ. ಆದರೆ ಬಡವರಿಗೆ ಮಾತ್ರವೇ ಈ ರೋಗ ಬರುವುದಿಲ್ಲ. ಹಣಗಾರರಿಗೂ ಈ ರೋಗ ಬರಬಹುದು ಯಾರು ಕುಷ್ಠರೋಗಿಗಳ ಜೊತೆಯಲ್ಲಿದ್ದರೂ ಅವರಿಗೆ ಕುಷ್ಠರೋಗ ಬರಬಹುದು. ಜನಸಂದಣಿ ಹೆಚ್ಚಾಗಿರುವ ಪ್ರದೇಶಗಳಲ್ಲಿರುವ, ಕೊಳಕಿನ ಮನೆಗಳಲ್ಲಿ ವಾಸಮಾಡುತ್ತ ಪುಷ್ಟಿಕರವಾದ ಆಹಾರವಿಲ್ಲದೆ ಸೊರಗಿ, ಶಕ್ತಿಯನ್ನು ಕುಗ್ಗಿಸುವ ರೋಗಗಳಿಗೂ ಗುರಿಯಾಗಿ ಪಾಡುಪಡುವ ಬಡವರಿಗೆ ಕುಷ್ಠರೋಗ ಬರುವುದು ಹೆಚ್ಚು.

(5) ಸಮಾಜದಲ್ಲಿ ಕುಷ್ಠರೋಗಿಗಳ ಸ್ಥಿತಿ, ಮತ್ತು ಕುಷ್ಠರೋಗಿಗಳ ವಿಚಾರದಲ್ಲಿ ವೈದ್ಯರ ಅಭಿಪ್ರಾಯ—ಕುಷ್ಠರೋಗ ಅಂಟುರೋಗವಾದ ಕಾರಣ, ಕುಷ್ಠರೋಗಿಗಳನ್ನು ಪ್ರತ್ಯೇಕವಾಗಿಟ್ಟಿರಬೇಕೆಂದು ಭರತಖಂಡದ ಪ್ರಾಚೀನ ಕಾಲದ ವೈದ್ಯಗ್ರಂಥಗಳಲ್ಲಿ ಹೇಳಿದೆ. ಅವರು ಇತರರೊಡನೆ ಸೇರುವುದಕ್ಕೆ ಹಿಂದೆ ಅವಕಾಶ ಕೊಡುತ್ತಿರಲಿಲ್ಲ ಈಗ ಹಾಗಿಲ್ಲ. ಅನೇಕ ಸಂದರ್ಭಗಳಲ್ಲಿ ಕುಷ್ಠರೋಗಿಗಳು ಅಂಗಡಿಗಳನ್ನಿಟ್ಟು ವ್ಯಾಪಾರ ಮಾಡುತ್ತಾರೆ; ಆಳುಗಳಾಗಿ ಮನೆಗಳಲ್ಲಿ ನೇಮಕವಾಗಿ ಕೆಲಸ ಮಾಡುತ್ತಾರೆ; ಕಾರ್ಖಾನೆಗಳಲ್ಲಿ, ಹೋಟಲು ಮುಂತಾದುವುಗಳಲ್ಲಿ ಕೆಲಸ ಮಾಡಲು ನೇಮಕವಾಗಿರುತ್ತಾರೆ. ಮೈಮೇಲೆಲ್ಲ ವ್ರಣಗಳಾಗಿ ಅವರ ಸ್ಥಿತಿ ಅಸಹ್ಯವಾಗುವವರೆಗೂ ಅವರನ್ನು ಪ್ರತ್ಯೇಕಿಸಿಡುವ ಯೋಜನೆಯೇ ಇರುವುದಿಲ್ಲ. ಹೀಗೆ ಕುಷ್ಠರೋಗಿಗಳು ಇತರರೊಡನೆ ಸೇರಲು ಅವಕಾಶವಿರಬಾರದು. ಸ್ವಲ್ಪಕಾಲಕ್ಕೆ ಹಿಂದೆ ಡಾಕ್ಟರುಗಳು ಕೂಡ ಕುಷ್ಠರೋಗ ನಿವಾರಣೆ ಸಾಧ್ಯವಿಲ್ಲವೆಂದು ಭಾವಿಸಿದ್ದರು. ಈಗ ಆ ಅಭಿಪ್ರಾಯವೇ ಬದಲಾಯಿಸಿದೆ. ಡಾಕ್ಟರುಗಳ ಸಹಾಯದಿಂದ ಕುಷ್ಠರೋಗ ನಿವಾರಣೆಗಾಗಿ ಬಹಳ ಕೆಲಸ ನಡೆಯುತ್ತಿದೆ. ವೈದ್ಯಶಿಕ್ಷಣದಲ್ಲಿ ಕುಷ್ಠರೋಗ ಚಿಕಿತ್ಸೆಯ ವಿಧಾನವನ್ನೂ ಸೇರಿಸಿ ಕಲಿಸಬೇಕು ಸಾಮಾನ್ಯಬಗೆಯ ಆಸ್ಪತ್ರೆಗಳಲ್ಲಿ ಕೂಡ ಕುಷ್ಠರೋಗಿಗಳನ್ನು ಪ್ರತ್ಯೇಕವಾಗಿಟ್ಟು ಚಿಕಿತ್ಸೆ ಮಾಡುವ ಏರ್ಪಾಡು ಆಗಬೇಕು. ಡಾಕ್ಟರುಗಳ ಸಹಾಯದಿಂದ ಕುಷ್ಠರೋಗ ನಿವಾರಣೆಗೂ ಕುಷ್ಠರೋಗ ಚಿಕಿತ್ಸೆಗೂ ಎಲ್ಲೆಲ್ಲಿಯೂ ಎಲ್ಲ ಪ್ರಯತ್ನಗಳೂ ನಡೆಯಬೇಕು.

4. ಕುಷ್ಠರೋಗ ನಿವಾರಣೆಯಲ್ಲಿ ತೊಡಗಿರುವ ಸಂಸ್ಥೆಗಳು.

(a) ಇಂಡಿಯಾ ಸರ್ಕಾರ.—ಪ್ರತ್ಯಕ್ಷವಾಗಿಯೂ ಮತ್ತು ಪರೋಕ್ಷವಾಗಿಯೂ ಇಂಡಿಯಾ ಸರ್ಕಾರದವರು ಕುಷ್ಠರೋಗ ನಿವಾರಣೆಯಲ್ಲಿ ಆಸಕ್ತಿಯನ್ನು ವಹಿಸಿದ್ದಾರೆ. ಕುಷ್ಠರೋಗಿಗಳಿಗೆ ಸಂಬಂಧಪಟ್ಟ ಆಕ್ಟನ್ನು ಜಾರಿಗೆ ತಂದಿದ್ದಾರೆ. "ಇಂಡಿಯನ್ ರಿಸರ್ಚ್ ಫಂಡ್ ಅಸೋಸಿಯೇಷನ್" ಎಂಬ ಸಂಶೋಧನ ಸಂಸ್ಥೆಯನ್ನೂ, ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಕುಷ್ಠರೋಗ ನಿವಾರಣೆಯ ಸಂಬಂಧವಾಗಿ ಏರ್ಪಟ್ಟಿರುವ "ಬ್ರಿಟಿಷ್ ಎಂಪೈರ್ ಲೆಪ್ರಸಿರಿಲೀಫ್ ಅಸೋಸಿಯೇಷನ್" ಸಂಸ್ಥೆಯ ಆಶ್ರಯದಲ್ಲಿ "ಇಂಡಿಯನ್ ಕೌನ್ಸಿಲ್" ಎಂಬ ಸಂಸ್ಥೆಯನ್ನೂ ಸ್ಥಾಪಿಸಿದ್ದಾರೆ. ಇವುಗಳಿಂದ ಕುಷ್ಠರೋಗ ನಿವಾರಣೆಗಾಗಿ ನಾನಾ ಪ್ರಯತ್ನಗಳು ವಿಚಕ್ಷಣೆಯಿಂದ ನಡೆಯುತ್ತಿವೆ.

(b) ಬ್ರಿಟಿಷ್ ಇಂಡಿಯಾ ಸರ್ಕಾರಗಳು.—ಮದರಾಸು ಪ್ರಾಂತವೇ ಮುಂತಾದುವುಗಳ ಸರ್ಕಾರಗಳು ವಿವಿಧ ರೀತಿಗಳಲ್ಲಿ ಕುಷ್ಠರೋಗ ನಿವಾರಣೆಯ ಪ್ರಯತ್ನಗಳನ್ನು ನೆರವೇರಿಸುತ್ತಿವೆ. ಕೆಲವು ಸರ್ಕಾರಗಳಲ್ಲಿ ಕುಷ್ಠರೋಗ ಚಿಕಿತ್ಸೆಗೆ ಆಸ್ಪತ್ರೆಗಳು ಏರ್ಪಟ್ಟಿವೆ. ಕುಷ್ಠರೋಗ ನಿವಾರಣೆಯ ಕಾರ್ಯಕಲಾಪಗಳನ್ನು ಖಾಸಗಿ ಸಂಸ್ಥೆಗಳ ಸಹಾಯದಿಂದ ಸರ್ಕಾರಗಳು ನೆರವೇರಿಸುವುದು ಆವಶ್ಯಕ.

(c) ಕುಷ್ಠರೋಗಿಗಳಿಗಾಗಿ ಮಿಷ್ಷ ಸಂಸ್ಥೆ.—ಇಂಡಿಯಾ ದೇಶದಲ್ಲಿ ಕುಷ್ಠರೋಗಿಗಳ ಚಿಕಿತ್ಸೆಗಾಗಿ ಏರ್ಪಟ್ಟಿರುವ ಮಿಷ್ಷ ಸಂಸ್ಥೆಯವರು ಅನೇಕ ಕಡೆಗಳಲ್ಲಿ ಆಸ್ಪತ್ರೆ ಮುಂತಾದ ಸಂಸ್ಥೆಗಳನ್ನು ಏರ್ಪಡಿಸಿ ಬಹು ಚೆನ್ನಾಗಿ ಕೆಲಸ ನಡೆಯಿಸುತ್ತಿದ್ದಾರೆ. ಅಲ್ಲದೆ, ಕುಷ್ಠರೋಗ ಸಂಬಂಧವಾಗಿ ಸಂಶೋಧನೆಯ ಪ್ರಯೋಗ ಕಾರ್ಯಗಳಿಗೂ ಅವರು ಏರ್ಪಾಡು ಮಾಡಿದ್ದಾರೆ.

(d) ಸ್ಥಳದ ಸಂಸ್ಥೆಗಳು.—ಕೆಲವು ಪ್ರದೇಶಗಳಲ್ಲಿ ಕುಷ್ಠರೋಗಿಗಳ ರಕ್ಷಣೆಗಾಗಿ ಸ್ಥಳದ ಸಂಸ್ಥೆಗಳು ಏರ್ಪಟ್ಟಿವೆ. ಇದು ಶ್ಲಾಘನೀಯವಾದರೂ ಈ ಸಂಸ್ಥೆಗಳಲ್ಲಿ ಅತ್ಯುತ್ತಮ ರೀತಿಯಲ್ಲಿ ಕೆಲಸ ನಡೆಯಬೇಕಾದರೆ ಅವುಗಳಿಗೆ ತಕ್ಕ ಸಲಹೆಗಾರರೂ, ಮೇಲ್ವಿಚಾರಣೆ ನೋಡಿಕೊಳ್ಳುವವರೂ ಬೇಕು.

5. ಕುಷ್ಠರೋಗ ಸಂಬಂಧವಾಗಿ ಇಂಡಿಯಾ ದೇಶದಲ್ಲಿ ಈಗ ನಡೆಯುತ್ತಿರುವ ಕಾರ್ಯಕಲಾಪಗಳು.

(1) ಚಿಕಿತ್ಸೆ.—ಕುಷ್ಠರೋಗವನ್ನು ವಾಸಿಮಾಡಬೇಕಾದರೆ "ಚಾಲ್ಮೂಗ್ರ" ಎಣ್ಣೆಯ ಇಂಜಕ್ಷನ್ ಕೊಡುವುದೇ ವಿಶೇಷವಾಗಿ ರೂಢಿಯಲ್ಲಿರುವ ಚಿಕಿತ್ಸೆ. ಇತರ ಔಷಧಗಳು ಅದರಷ್ಟು ಫಲಕಾರಿಯಾಗಿ ಪರಿಣಮಿಸಿಲ್ಲ. ಚಿಕಿತ್ಸೆಯಜೊತೆಗೆ ಪಥ್ಯವೂ ಕಟ್ಟುನಿಟ್ಟಾಗಿ ನಡೆಯಬೇಕು.

ರೋಗಿಗಳು ಹೊರಗಿನಿಂದ ಬಂದು ಚಿಕಿತ್ಸೆ ಪಡೆದು ಹೋಗತಕ್ಕ ಕೇಂದ್ರಗಳಲ್ಲಿ ಉತ್ತಮವಾದ ಸಿಬ್ಬಂದಿಯನ್ನು ಏರ್ಪಡಿಸಿ, ಅಲ್ಲಯೇ ಇದ್ದುಕೊಂಡು ಚಿಕಿತ್ಸೆಯನ್ನು ಪಡೆಯತಕ್ಕ ಕೇಂದ್ರಗಳ ಜೊತೆಗೆ ಆ ಕೇಂದ್ರಗಳನ್ನೂ ಸೇರಿಸುವುದರಿಂದ ಫಲಕಾರಿಯಾದ ರೀತಿಯಲ್ಲಿ ಕೆಲಸ ನಡೆಯಬಹುದೆಂದು ಭಾವಿಸಲಾಗಿದೆ.

(2) ರೋಗಿಗಳನ್ನು ಪ್ರತ್ಯೇಕವಾಗಿಡುವುದು.—ಕುಷ್ಠರೋಗದಲ್ಲಿ, ಜೊತೆಯಲ್ಲಿರುವವರಿಗೆ ಅಂಟುವಾ (ಸಾಂಕ್ರಾಮಿಕ) ಬಗೆಯದೊಂದು ವಾತ್ತು ಅಂಟದಬಗೆಯದೊಂದು ಈ ರೀತಿ ಎರಡು ಬಗೆಗಳುಂಟೆಂದು ಹಿಂದೆಯೇ ತಿಳಿಸಲಾಯಿತಷ್ಟೆ. ಇತರ

ರಿಗೆ ಅಂಟುವ ಬಗೆಯ ಕುಷ್ಠರೋಗವಿರತಕ್ಕವರ ಸಂಪರ್ಕವು ಇತರರಿಗೆ ಆಗದಂತೆ ತಪ್ಪಿಸದೇಕಾದುದು ಅತ್ಯವಶ್ಯಕ. ಇಂಡಿಯಾ ದೇಶದಲ್ಲಿ ಒಟ್ಟು 2,50,000 ಜನ "ಸಾಂಕ್ರಾಮಿಕ" ಕುಷ್ಠರೋಗಿಗಳಿದ್ದಾರೆ. ಆದರೆ, ಸದ್ಯದಲ್ಲಿ ಅವರಲ್ಲಿ 14 000 ಜನರನ್ನು ಮಾತ್ರ ಆಸ್ಪತ್ರೆಗಳಲ್ಲಿಟ್ಟುಕೊಂಡು ಚಿಕಿತ್ಸೆ ಮಾಡುವುದು ಸಾಧ್ಯ. ಪ್ರಾಂತೀಯ ಮತ್ತು ಸ್ಥಳೀಯ ಆಡಳಿತಗಾರರು ತಮ್ಮ ತಮ್ಮ ಆಡಳಿತದ ಪ್ರದೇಶಗಳಲ್ಲಿರುವ "ಸಾಂಕ್ರಾಮಿಕ" ಕುಷ್ಠರೋಗಿಗಳನ್ನಾದರೂ ರಕ್ಷಿಸಲು ತಕ್ಕ ಏರ್ಪಾಡನ್ನು ಮಾಡಬೇಕಾಗಿದೆ. ರೋಗಿಗಳನ್ನು ಪ್ರತ್ಯೇಕಿಸಿಡುವುದಕ್ಕಾಗಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ರಕ್ಷಣಾಲಯಗಳು ಬೇಕಾಗಿವೆ.

ಹಿಂದಿನ ಕಾಲದಲ್ಲಿ ಅಯಾ ಮನೆಗಳಲ್ಲಿಯೇ ತಕ್ಕಂತೆ ಕುಷ್ಠರೋಗಿಗಳನ್ನು ಪ್ರತ್ಯೇಕವಾಗಿಡುತ್ತಿದ್ದರು. ಈಗ ಈ ವಾಡಿಕೆಯು ತಪ್ಪಿಹೋಗುತ್ತಿದೆ. ಈ ವಾಡಿಕೆಯನ್ನು ಮತ್ತೆ ರೂಢಿಗೆ ತರಬೇಕು. ಮನೆಗಳಲ್ಲಿ ಕುಷ್ಠರೋಗಿಗಳನ್ನು ಪ್ರತ್ಯೇಕವಾಗಿಡುವುದರಲ್ಲಿ ಆ ವ್ಯಾಧಿಯು ಚಿಕ್ಕಮಕ್ಕಳಿಗೆ ಅಂಟದಂತೆ ನೋಡಿಕೊಳ್ಳುವುದೇ ಮುಖ್ಯೋದ್ದೇಶ. ಆದರೆ ಸಣ್ಣ ಮನೆಗಳಲ್ಲಿ ಅವರನ್ನು ಹಾಗೆ ಪ್ರತ್ಯೇಕವಾಗಿಡಲು ಸ್ಥಳವಿಲ್ಲದೆ ಹೋದರೆ ಒಟ್ಟು ಗ್ರಾಮದಲ್ಲಿರುವ ಕುಷ್ಠರೋಗಿಗಳನ್ನೆಲ್ಲಾ ಒಂದು ಕಡೆ ಪ್ರತ್ಯೇಕವಾಗಿಡುವ ಏರ್ಪಾಡು ಮಾಡಬೇಕು. ಕೆಲವು ಕಡೆ ಈ ಏರ್ಪಾಡು ನಡೆದು ಉಪಯೋಗ ಕಂಡಿದೆ.

(3) ಮಕ್ಕಳಿಗಾಗಿ ವಿಶೇಷ ರೀತಿಯ ಕಾರ್ಯಕ್ರಮ:— ಇತರ ದೇಶಗಳಲ್ಲಿ ಮಕ್ಕಳಿಗೆ ಕುಷ್ಠರೋಗ ತಗುಲದಂತೆ ಮಾಡುವುದಕ್ಕಾಗಿ ಅನೇಕ ಏರ್ಪಾಡುಗಳು ನಡೆದಿವೆ. ಈ ವಿಚಾರವಾಗಿ ಇಂಡಿಯಾ ದೇಶದಲ್ಲಿ ವಿಶೇಷ ರೀತಿಯಲ್ಲಿ ಪ್ರಯೋಗ ಪರೀಕ್ಷೆಗಳು ನಡೆಯುತ್ತಿರುವುದು ಮದರಾಸು ಪ್ರಾಂತದ ನೆಲ್ಲಿದಾಪೇಟೆಯಲ್ಲಿ ಮಾತ್ರ. ಕುಷ್ಠರೋಗದ ಮಕ್ಕಳಿಗಾಗಿ ಶಾಲ್ವ ಜಿಲ್ಲೆಯಲ್ಲಿ ಒಂದು ರಕ್ಷಣಾಲಯ ಏರ್ಪಡಿಸಲಾಗಿದೆ. ಸ್ಕೂಲುಗಳಲ್ಲಿ ಪ್ಯಾಸಿಂಗ ಮಾಡುವ ಮಕ್ಕಳಿಗೆ ಕುಷ್ಠರೋಗ ವಿದೆಯೇ-ಎಂಬುದನ್ನು ವೈದ್ಯರಿಂದ ಪರೀಕ್ಷೆ ಮಾಡಿಸಬೇಕು. ಕುಷ್ಠರೋಗವಿರತಕ್ಕವರಿಗೆ ಚಿಕಿತ್ಸೆ ಮಾಡಿಸಬೇಕು; ಇತರರಿಗೆ ಅಂಟುವ ಬಗೆಯ ಕುಷ್ಠರೋಗವೆಂದು ಡಾಕ್ಟರುಗಳು ಸರ್ಟಿಫಿಕೇಟು ಕೊಟ್ಟ ಮಕ್ಕಳನ್ನು ಮಾತ್ರವೇ ಇತರರಜೊತೆಗೆ ಸೇರಿಸಬೇಕು.

(4) ಸರ್ವೇ ಪರಿಶೀಲನೆಯ ಕಾರ್ಯ:— ಕಳೆದ ಹದಿನೈದು ವರ್ಷಗಳಿಂದೀಚೆಗೂ ಕುಷ್ಠರೋಗವು ಎಲ್ಲೆಲ್ಲಿ ಎಷ್ಟೆಷ್ಟುವಷ್ಟಿಗಿದೆಯೆಂಬ ವಿಚಾರವಾಗಿ ಇಂಡಿಯಾ ದೇಶದಲ್ಲಿ "ಸರ್ವೇ" ಪರಿಶೀಲನೆ ನಡೆದಿವೆ. ಈ ಸಂದರ್ಭದಲ್ಲಿ ಪ್ರಚಾರ ಕಾರ್ಯವೂ ನಡೆದು ಚಿಕಿತ್ಸಾ ವಿಧಾನವೂ ಜನರಿಗೆ ವಿವರಿಸಲ್ಪಟ್ಟಿದೆ. ಮತ್ತಷ್ಟು ವಿಶದವಾದ ರೀತಿಯಲ್ಲಿ ಈ ಬಗೆಯ "ಸರ್ವೇ" ಕಾರ್ಯಕ್ರಮಗಳನ್ನು ನಡೆಯಿಸುವುದು ಅತ್ಯವಶ್ಯಕವಾಗಿದೆ.

(5) ಪ್ರಚಾರ ಕಾರ್ಯ:— ಕುಷ್ಠರೋಗದ ಸಂಬಂಧವಾಗಿ ಪುಸ್ತಕಗಳನ್ನೂ "ಪೋಸ್ಟರ್" ಹಾಳಿಗಳನ್ನೂ ಪ್ರಕಟಿಸುವುದರ ಮೂಲಕವೂ, ದೀಪ ಚಿತ್ರಗಳೊಡನೆ ಉಪನ್ಯಾಸಮಾಡುವುದರ ಮೂಲಕವೂ ಪ್ರಚಾರಕಾರ್ಯವನ್ನು ನೆರವೇರಿಸಬೇಕು ಮುಖ್ಯವಾಗಿ ಪಾಠಶಾಲೆಗಳಲ್ಲಿ ಹೆಚ್ಚಿನ ಪ್ರಚಾರ ಕಾರ್ಯವು ನಡೆಯುವುದೇಕಾಗಿದೆ. ಮಕ್ಕಳನ್ನೂ ಚಿಕ್ಕಮಸ್ಸಿನವರನ್ನೂ ಕುಷ್ಠರೋಗಿಗಳ ಸಂಪರ್ಕವಿಲ್ಲದಂತೆ ನೋಡಿಕೊಳ್ಳುವ ವಿಷಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪೆಡ್ಡು ಪ್ರಚಾರ ನಡೆಯಬೇಕು.

ಕುಷ್ಠರೋಗಿಗಳ ರಕ್ಷಣಾಲಯಗಳು ಯಾವಾಗಲೂ ಊರಿಗೆ ದೂರವಾಗಿರುವುದು ಉತ್ತಮ. ಈಗಿನ ಕಾಲದಲ್ಲಿ ಈ ರಕ್ಷಣಾಲಯಗಳನ್ನು ಪ್ರತ್ಯೇಕ ವಸಾಹತುಗಳ ರೂಪದಲ್ಲಿ ಕಟ್ಟುವುದು ವಾಡಿಕೆಯಾಗಿದೆ.

ಕುಷ್ಠರೋಗಿಗಳ ರಕ್ಷಣಾಲಯಗಳಲ್ಲಿ ಚಿಕಿತ್ಸೆ ಮತ್ತು ಆಡಳಿತ—ಇವುಗಳಿಗೆ ಸಂಬಂಧಪಟ್ಟ ಸಿಬ್ಬಂದಿಯ ಜೊತೆಗೆ ನರ್ಸುಗಳ ಸಿಬ್ಬಂದಿಯೂ ಇರಬೇಕು. ಈ ರಕ್ಷಣಾಲಯಗಳಲ್ಲಿ ಬಹುಮಟ್ಟಿಗೆ "ಸಾಂಕ್ರಾಮಿಕ" ಕುಷ್ಠರೋಗಿಗಳನ್ನೇ ಇಟ್ಟುಕೊಳ್ಳಬೇಕಾಗುತ್ತದೆ. ಸಾಂಕ್ರಾಮಿಕ ಕುಷ್ಠರೋಗಿಗಳಿಗೂ ಸಾಂಕ್ರಾಮಿಕವಲ್ಲದ ಕುಷ್ಠರೋಗಿಗಳಿಗೂ ಬೇರೆ ಬೇರೆ ರಕ್ಷಣಾಲಯಗಳಿರಬೇಕು.

ಕೆಲವು ಪ್ರಾಂತಗಳ ಸರ್ಕಾರದವರು ತಮ್ಮ ತಮ್ಮ ರಕ್ಷಣಾಲಯಗಳಲ್ಲಿ ಇತರ ಪ್ರಾಂತಗಳ ಕುಷ್ಠರೋಗಿಗಳನ್ನು ಸೇರಿಸುವುದಿಲ್ಲ. "ರೆಪರ್ ಆಕ್ಟ್" ಕಾನೂನಿನ ಪ್ರಕಾರ ಬಂದ ಕುಷ್ಠರೋಗಿಗಳಾದ ಭಿಕ್ಷುಕರಿಗಾಗಲಿ, ಅಥವಾ ತಾವಾಗಿಯೇ ಸೇರಲು ಇಷ್ಟಪಡುವ ಕುಷ್ಠರೋಗಿಗಳಿಗಾಗಲಿ ಅವರು ತಮ್ಮ ತಮ್ಮ ಪ್ರಾಂತಗಳವರಿಗೇ ಆಶ್ರಯ ಕೊಡುತ್ತಾರೆ. ಈ ಕಟ್ಟುನಿಟ್ಟನ್ನು ಸ್ವಲ್ಪ ಮಟ್ಟಿಗೆ ಕಡಮೆ ಮಾಡುವುದು ಮೇಲು.

ಪ್ರತಿಯೊಂದು ರಕ್ಷಣಾಲಯದಲ್ಲಿಯೂ ಸುಮಾರು 500 ಜನ ಕುಷ್ಠರೋಗಿಗಳಿರಬಹುದು. ಪ್ರತಿಯೊಬ್ಬ ರೋಗಿಗೂ ವೆಚ್ಚಗಳಿಗಾಗಿ ತಿಂಗಳೊಂದಕ್ಕೆ ಹನ್ನೆರಡು ರೂಪಾಯಿಗಳು ಸಾಕು.

ಅತ್ಯಂತ ಅನುಕೂಲವಾದ ಪರಿಸ್ಥಿತಿಯಲ್ಲಿಯೂ ಕೂಡ ಕುಷ್ಠರೋಗಿಗಳ ರಕ್ಷಣಾಲಯಗಳ ವೆಚ್ಚವನ್ನು ಅವುಗಳಲ್ಲಿ ನಡೆಯುವ ಜಮಾನು ವ್ಯವಸಾಯ ಮತ್ತು ಕೈಗಾರಿಕೆ ಇವುಗಳಿಂದ ಬರತಕ್ಕ ಆದಾಯದಿಂದಲೇ ಹೊರಡಿಸುವುದು ಸಾಧ್ಯವಲ್ಲ. ಹೊಸ ಸಂಸ್ಥೆಗಳನ್ನು ಏರ್ಪಡಿಸುವಲ್ಲಿ, ರೋಗಿಗಳಿಗೆ ಉಪಯುಕ್ತವಾದ ಮತ್ತು ಆದಾಯಕರವಾದ ಕೈಕಸಬುಗಳನ್ನು ಒದಗಿಸತಕ್ಕ ಅಂಶವನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಜಮಾನು ವ್ಯವಸಾಯವೇ ಅತ್ಯುತ್ತಮವಾದ ಕಸಬು.

ಕುಷ್ಠರೋಗಿಗಳ ರಕ್ಷಣಾಲಯಗಳಲ್ಲಿ ದಂಪತಿಗಳು ಒಟ್ಟಿಗಿರುವುದಕ್ಕೆ ಅವಕಾಶ ಕೊಟ್ಟರೆ ರೋಗಿಗಳಿಗೆ ಅನುಕೂಲ. ಆದರೆ ಅದರಿಂದ ಮಕ್ಕಳಾಗುವುದು ತಪ್ಪುವಂತಿಲ್ಲ. ಹುಟ್ಟಿದ ಮಗುವನ್ನು ಕೂಡಲೆ ಪ್ರತ್ಯೇಕವಾಗಿಡದೆ ಇದ್ದಲ್ಲಿ ಆ ಮಗುವಿಗೂ ಕುಷ್ಠರೋಗವು ಪ್ರಾಪ್ತವಾಗುತ್ತದೆ. ಸ್ತ್ರೀಯು ಗರ್ಭಧಾರಣೆಯ ವಯಸ್ಸನ್ನು ಮೀರಿದ್ದ ಹೊರತು ಕುಷ್ಠರೋಗಿಗಳ ರಕ್ಷಣಾಲಯಗಳಲ್ಲಿ ಗಂಡಹೆಂಡಿರು ಒಟ್ಟಿಗಿರುವುದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕು. ಹುಟ್ಟಿದ ಮಕ್ಕಳನ್ನು ಮಾತ್ರ ಆದಷ್ಟು ಶೀಘ್ರದಲ್ಲಿ ಪ್ರತ್ಯೇಕವಾಗಿಡಬೇಕು.

ಮಾದರಿಯ ರಕ್ಷಣಾಲಯ:—ಕುಷ್ಠರೋಗವು ವ್ಯಾಪಿಸಿರುವ ಪ್ರತಿಯೊಂದು ಪ್ರಾಂತದಲ್ಲಿಯೂ ಒಂದೊಂದು ಮಾದರಿ ರಕ್ಷಣಾಲಯವಿರಬೇಕಲ್ಲದೆ, ಕುಷ್ಠರೋಗ ನಿರೋಧಕವಾದ ಎಲ್ಲ ಕಾರ್ಯಕರಾಪಗಳಿಗೂ ಅದು ಕೇಂದ್ರಸ್ಥಾನವಾಗಿರಬೇಕು.

8. ಕುಷ್ಠರೋಗದ ಸಂಬಂಧದಲ್ಲಿ ಕಾನೂನು ರಚನೆ.

ಕುಷ್ಠರೋಗವು ಒಂದು ವಿಶೇಷ ರೀತಿಯ ರೋಗವಾಗಿರುವುದರಿಂದ ಅದು ಹರಡದಂತೆ ಅದನ್ನು ಹತೋಟಿಯಲ್ಲಿಟ್ಟು ನೋಡಿಕೊಳ್ಳಬೇಕಾದರೆ ವಿಶೇಷ ರೀತಿಯ ಕಾನೂನು ಅವಶ್ಯಕ. ಕುಷ್ಠರೋಗದ ಸಂಬಂಧದಲ್ಲಿ ಈಗ ಜಾರಿಯಲ್ಲಿರುವ ಕಾನೂನಿನ ಜೊತೆಗೆ ಆಗಬೇಕಾದ ಹೊಸ ಕಾನೂನುಗಳು ಯಾವುವೆಂಬುದು

ಕುಷ್ಠರೋಗಿಗಳಾದ ಭಿಕ್ಷುಕರಿಗೆ ಭಿಕ್ಷೆ ದೊರೆತರೆ ಅವರು ಇತರರ ಜೊತೆಯಲ್ಲಿ ಸೇರಿ, ರೋಗ ಹರಡಲು ಕಾರಣರಾಗುತ್ತಾರೆ. ಅವರು ತಮಗಾಗಿ ಏರ್ಪಟ್ಟಿರತಕ್ಕ ವಸಾಹತಗಳಿಗೂ ಆಸ್ಪತ್ರೆಗಳಿಗೂ ಹೋಗುವುದೇ ಇಲ್ಲ. ಆದಕಾರಣ ಕುಷ್ಠರೋಗಿಗಳಿಗೆ ಭಿಕ್ಷೆ ಹಾಕಕೂಡದೆಂದೂ, ಅದಕ್ಕೆ ಬದಲಾಗಿ ಆ ಮೊಬಲಗನ್ನೂ ಪದಾರ್ಥಗಳನ್ನೂ ಕುಷ್ಠರೋಗಿಗಳ ವಸಾಹತಗಳಿಗೂ, ಆಸ್ಪತ್ರೆಗಳಿಗೂ ಕಳುಹಿಸಿಕೊಡಬೇಕೆಂದೂ ಜನರಿಗೆ ತಿಳಿವಳಿಕೆ ಕೊಡಬೇಕು.

(6) ಸಂಶೋಧನ ಕಾರ್ಯ:— ಕುಷ್ಠರೋಗ ಸಂಬಂಧವಾಗಿ ಇನ್ನೂ ತಿಳಿಯಬೇಕಾದ ವಿಚಾರಗಳು ಬೇಕಾದಷ್ಟಿವೆ. ಸಂಶೋಧನಗಳು ನಡೆದು ಅವುಗಳ ವಿವರಗಳು ತಿಳಿಯಬೇಕು. ಕಲ್ಕತ್ತೆಯಲ್ಲಿ ಈಗ ಸಂಶೋಧನ ನಡೆಯುತ್ತಿದೆ. ಸಂಶೋಧನ ಕಾರ್ಯಗಳಿಗಾಗಿ ಇನ್ನೂ ಹೆಚ್ಚಿನ ಏರ್ಪಾಡುಗಳು ನಡೆಯಬೇಕು.

(7) ಮೆಡಿಕಲ್ ಕಾಲೇಜುಗಳಲ್ಲಿ ಶಿಕ್ಷಣ:— ಮೆಡಿಕಲ್ ಕಾಲೇಜುಗಳಲ್ಲಿಯೂ ಮೆಡಿಕಲ್ ಸ್ಕೂಲುಗಳಲ್ಲಿಯೂ ಕುಷ್ಠರೋಗದ ಸಂಬಂಧದ ವಿಚಾರಗಳನ್ನೂ, ಅದರ ಚಿಕಿತ್ಸೆಯ ವಿಧಾನಗಳನ್ನೂ ಬೋಧಿಸುವುದಕ್ಕಾಗಿ ಈಗಿರುವುದಕ್ಕಿಂತಲೂ ಉತ್ತಮವಾದ ಏರ್ಪಾಡು ನಡೆಯಬೇಕು. ಈ ವಿಚಾರದಲ್ಲಿ ಇಂಡಿಯಾದೇಶದ "ಮೆಡಿಕಲ್ ಕೌನ್ಸಿಲ್" ಸಂಸ್ಥೆಯವರು ಪಾಠಪ್ರವಚನಗಳ ಪುಸ್ತಕಗಳನ್ನೂ, ದೀಪಚಿತ್ರಗಳನ್ನೂ ಒದಗಿಸಿ ಸಹಾಯಮಾಡಿದ್ದಾರೆ.

(8) ಪದವೀಧರರಿಗೆ ಶಿಕ್ಷಣ:— ಕಲ್ಕತ್ತಾ ಮತ್ತು ಇತರ ಪ್ರದೇಶಗಳಲ್ಲಿ ವಿಶ್ವವಿದ್ಯಾನಿಲಯದ ಪದವೀಧರರಾದ ವಿದ್ಯಾವಂತರಿಗೆ ಪ್ರತಿವರ್ಷವೂ ಎರಡೆರಡು ವಾರಗಳವರೆಗೆ ಕುಷ್ಠರೋಗದ ಸಂಬಂಧದಲ್ಲಿ ಶಿಕ್ಷಣ ದೊರೆಯುತ್ತಿದೆ. ಇನ್ನೂ ಹೆಚ್ಚಿನ ಅವಧಿಯವರೆಗೆ ಶಿಕ್ಷಣಕೊಡುವುದಕ್ಕೆ ತಕ್ಕಷ್ಟು ಸೌಕರ್ಯಗಳನ್ನು ಒದಗಿಸಬೇಕಾಗುತ್ತದೆ.

6. ಕುಷ್ಠರೋಗದ ಚಿಕಿತ್ಸೆ ಏರ್ಪಾಡು

ಈಗಿರುವ ಸಾಮಾನ್ಯ ವಿಧದ ಆಸ್ಪತ್ರೆಗಳಲ್ಲೇ ಕುಷ್ಠರೋಗಕ್ಕೆ ಚಿಕಿತ್ಸೆ ಮಾಡುವ ಶಾಖೆಗಳನ್ನು ಏರ್ಪಡಿಸಿ ಉತ್ಸಾಹಶಾಲಿಗಳಾದ ಡಾಕ್ಟರುಗಳನ್ನು ನೇಮಕಮಾಡಿದ ಪಕ್ಷಕ್ಕೆ ಸುಲಭ ವೆಚ್ಚದಲ್ಲಿ ಚೆನ್ನಾಗಿ ಕೆಲಸನಡೆಯುತ್ತದೆ. ಇಂಡಿಯಾದೇಶದ ಕೆಲವು ಭಾಗಗಳಲ್ಲಿ ವಿಶೇಷ ರೀತಿಯ ಕುಷ್ಠರೋಗದ ಚಿಕಿತ್ಸಾಲಯಗಳು ಏರ್ಪಟ್ಟಿವೆ. ಆದರೆ ತಕ್ಕಷ್ಟು ವೈದ್ಯಸಿಬ್ಬಂದಿ ಇಲ್ಲದಕಾರಣ ಈಗಿರುವ ಡಾಕ್ಟರುಗಳು ಮೈತಿಮೀರಿ ಕೆಲಸಮಾಡಬೇಕಾಗಿದೆ. ಅವುಗಳಲ್ಲಿರುವ ಈ ನ್ಯೂನತೆಯನ್ನು ಹೋಗರಾಡಿಸಬೇಕು. ಅಲ್ಲದೆ ಅವುಗಳಲ್ಲೇ ಇರುವ ಕುಷ್ಠರೋಗಿಗಳಿಗೆ ಮಾತ್ರ ಚಿಕಿತ್ಸೆ ಮಾಡದೆ ಹೊರಗಿನಿಂದ ಬಂದುಹೋಗುವ ಕುಷ್ಠರೋಗಿಗಳಿಗೂ ಚಿಕಿತ್ಸೆ ನಡೆಯುವ ಏರ್ಪಾಡಾಗಬೇಕು.

7. ಕುಷ್ಠರೋಗಗಳ ರಕ್ಷಣಾಲಯಗಳು

ರಕ್ಷಣಾಲಯಗಳಿಗೆ ಕುಷ್ಠರೋಗಿಗಳಲ್ಲಿ ತಾವಾಗಿಯೇ ಇಷ್ಟಪಟ್ಟವರು ಸೇರುವಂತೆ ಅವಕಾಶವನ್ನು ಕಲ್ಪಿಸಬೇಕು. ಸಾಂಕ್ರಾಮಿಕ ಕುಷ್ಠರೋಗದಿಂದ ನರಳುತ್ತಿರುವವರು ತಾವು ಪ್ರತ್ಯೇಕವಾಗಿರಬೇಕೆಂದು ಯೋಚಿಸಿ ರಕ್ಷಣಾಲಯಗಳಿಗೆ ಸೇರಲು ಬಂದರೆ ಅವರಿಗೆ ಸ್ವಲ್ಪಾವಕಾಶವನ್ನು ಕಲ್ಪಿಸಲು ಸಾಧ್ಯವಾದ ಸೌಕರ್ಯಗಳನ್ನೆಲ್ಲಾ ಒದಗಿಸಬೇಕು. ಕುಷ್ಠರೋಗಿಗಳಾದ ಭಿಕ್ಷುಕರನ್ನೂ ಮತ್ತು ಪ್ರತ್ಯೇಕವಾಗಿ ವಾಸಿಸಲು ತಾವಾಗಿಯೇ ಇಷ್ಟಪಡದ ಕುಷ್ಠರೋಗಿಗಳನ್ನೂ ಬಲಾತ್ಕಾರಪಡಿಸಿ ಪ್ರತ್ಯೇಕವಾಗಿಡಲು ಅನುಕೂಲವಾಗುವಂತೆ ಪ್ರತ್ಯೇಕವಾದ ರಕ್ಷಣಾಲಯಗಳಿರಬೇಕು.

ವರದಿಯಲ್ಲಿದೆ. ಇಲ್ಲಿ ಅದನ್ನು ನೂಚಿಸುವುದು ಅಗತ್ಯವಿಲ್ಲ. ಕಾನೂನನ್ನು ರಚಿಸತಕ್ಕ ವಿಚಾರವನ್ನು ತೀವ್ರವಾಗಿ ಪರಿಗಣಿಸಬೇಕಾಗಿದೆ.

9. ಕುಷ್ಠರೋಗ ನಿರೋಧ ಕಾರ್ಯಗಳ ಮುಂದಿನ ನಡೆವಳಿಕೆ.

(1) ಒಟ್ಟು ಇಂಡಿಯಾ ದೇಶಕ್ಕೊಂದು ಕೇಂದ್ರ ಸಂಸ್ಥೆ:—ಆರೋಗ್ಯ ರಕ್ಷಣೆಯು ಆಯಾ ಪ್ರಾಂತಗಳಿಗೆ ಸಂಬಂಧಪಟ್ಟ ವಿಚಾರವೇ ಆದರೂ ಆರೋಗ್ಯ ರಕ್ಷಣೆಯನ್ನು ವಿಶೇಷ ರೀತಿಯಲ್ಲಿ ನಡೆಯಬೇಕಾದರೆ ಕುಷ್ಠರೋಗ ಸಂಬಂಧವಾಗಿಯೂ ಒಂದು ಕೇಂದ್ರ ಸಂಸ್ಥೆಯು ಇರಬೇಕಾದುದು ಅತ್ಯವಶ್ಯಕ. ಅದು ಬೇಗ ಏರ್ಪಡಬೇಕು.

ಇಂಥ ಕೇಂದ್ರ ಸಂಸ್ಥೆಯು ಪ್ರಾಂತಿಕ ಸಂಸ್ಥೆಗಳ ಕಾರ್ಯಕರಾಪಗಳ ಗೋಜಿಗೆ ಹೋಗದಂತೆ ಆಯಾ ಪ್ರಾಂತಗಳಲ್ಲಿರುವ ಸಂಸ್ಥೆಗಳಿಗೆ ಒತ್ತಾಸೆಯನ್ನು ಕೊಡಬೇಕು. ಕಾಲಕ್ರಮದಲ್ಲಿ ಅದು ಕುಷ್ಠರೋಗದ ಹತೋಟಿಯ ಕಾರ್ಯದಲ್ಲಿ ಪ್ರಧಾನ ಪಾತ್ರವನ್ನು ವಹಿಸಬೇಕು. ಈ ಸಂಸ್ಥೆಯು ಇರತಕ್ಕ ಸ್ಥಾನವು ಸಾಮಾನ್ಯವಾಗಿ ಮಧ್ಯರಂಗದಲ್ಲಿರಬೇಕು. ನಾಡಿನ ಇತರ ಪ್ರದೇಶಗಳಿಗೆ ಇಲ್ಲಿಂದ ಯುಕ್ತವಾದ ಸಂಚಾರಮಾರ್ಗಗಳಿರಬೇಕು, ಮತ್ತು ಎಲ್ಲಿ ಕುಷ್ಠರೋಗವು ಹೆಚ್ಚಾಗಿರುವುದೋ ಅಂಥ ಪ್ರಾಂತದಲ್ಲಿ ಈ ಕೇಂದ್ರ ಸಂಸ್ಥೆಯು ಇರದೇಕ್ಕಾಮದು ಅಗತ್ಯ. ಈ ಕೇಂದ್ರ ಸಂಸ್ಥೆಯು ಒಂದು ದೊಡ್ಡದಾದ ಕುಷ್ಠರೋಗಿಗಳ ರಕ್ಷಣಾಲಯಕ್ಕೆ ಸಮೀಪವಾಗಿರಬೇಕು. ಈ ರಕ್ಷಣಾಲಯದಲ್ಲಿ ಅವಶ್ಯಕವಾದ ಎಲ್ಲ ಸಲಕರಣೆಗಳೂ ಇದ್ದು ಅಲ್ಲಿ ರೋಗ ಚಿಕಿತ್ಸೆಯ ವಿದ್ಯೆಯ ಸಂಬಂಧವಾಗಿ ಪರಿಶೋಧನೆಗಳನ್ನು ನಡೆಯಿಸಲು ಅನುಕೂಲವಾಗಿರಬೇಕು.

(2) ಪ್ರಾಂತ ಸರ್ಕಾರಗಳ ಕಾರ್ಯನೀತಿ, ಸಿಬ್ಬಂದಿ ಮತ್ತು ಕುಷ್ಠರೋಗಿಗಳ ರಕ್ಷಣಾಲಯಗಳು:—ಪ್ರಾಂತ ಸರ್ಕಾರಗಳವರು ಕುಷ್ಠರೋಗ ನಿರೋಧಕಾರ್ಯದಲ್ಲಿ ತೃಪ್ತಿಕರವಾಗಿ ಕೆಲಸ ನಡೆಯಿಸಬೇಕಾದರೆ ಅವರು ಸದಕ್ಕಾಗಿ ಹಣವನ್ನು ಹೆಚ್ಚಮಾಡಲು ಸಿದ್ಧರಾಗಿರಬೇಕು. ಈಗ ನಿರ್ದಿಷ್ಟ ರೀತಿಯಲ್ಲಿ ಯಾವುದೊಂದು ಕಾರ್ಯನೀತಿಯನ್ನೂ ಅನುಸರಿಸುತ್ತಿಲ್ಲ. ಸಿಬ್ಬಂದಿಯಂತೂ ಸುತರಾಂ ಸಾಲದು. ಸಿಬ್ಬಂದಿಯ ತರಬೂ ಕಡಮೆ; ಮತ್ತು ಅವರಿಗೆ ಮುಂದಿನ ಬಡ್ತಿಗಳಿಗೂ ಅವಕಾಶವಿಲ್ಲ. ಅಲ್ಲದೆ ಆಯಾ ಪ್ರಾಂತಗಳಲ್ಲಿ ಅವರಿಗೆ ತಕ್ಕ ಸ್ಥಾನಮಾನಗಳೂ ಇಲ್ಲ.

ಕುಷ್ಠರೋಗವು ಸಾಮಾನ್ಯವಾಗಿ ಹರಡಿರುವ ಪ್ರಾಂತ್ಯಗಳಲ್ಲಿ ಕುಷ್ಠರೋಗದ ಹತೋಟಿಯ ಅಧಿಕಾರಿಗಳಾಗಿ ಕೆಲಸಮಾಡಲು ವಿದ್ಯಾವಂತರೂ, ವೈದ್ಯ ವಿದ್ಯಾಪ್ರವೀಣರೂ ಮತ್ತು ಕುಷ್ಠರೋಗದ ಚಿಕಿತ್ಸೆಯಲ್ಲಿ ಅನುಭವವುಳ್ಳವರೂ ಆದ ಡಾಕ್ಟರುಗಳು ಅಗತ್ಯವಾಗಿ ನೇಮಕವಾಗಬೇಕು. ಕುಷ್ಠರೋಗ ನಿವಾರಣೆಗಾಗಿ ತಕ್ಕ ಕಾರ್ಯನೀತಿಯೊಂದನ್ನು ಗೊತ್ತುಮಾಡಬೇಕು. ಆದರ ಮೇರೆಗೆ ನಡೆಯುವ ಕಾರ್ಯಕರಾಪಗಳಿಗೆ ತಕ್ಕಷ್ಟು ಹಣವನ್ನೊದಗಿಸಬೇಕು. ಪ್ರತಿಯೊಂದು ಪ್ರಾಂತದಲ್ಲಿಯೂ ಕುಷ್ಠರೋಗಿಗಳಿಗೆ ಒಂದು ರಕ್ಷಣಾಲಯವನ್ನು ಏರ್ಪಡಿಸಬೇಕು. ಆಯಾ ಪ್ರಾಂತದ ಕುಷ್ಠರೋಗ ನಿವಾರಣೆಯ ಕಾರ್ಯಕರಾಪಗಳಿಗೆಲ್ಲ ಅದು ಕೇಂದ್ರವಾಗಿ ಪರಿಣಮಿಸಬೇಕು.

ಪಿ. ಪಾರ್ಥಸಾರಥಿ,
ಮೈಸೂರು ಜನಾರೋಗ್ಯ ರಕ್ಷಣೆಯ ಇಲಾಖೆಯ ಡೈರೆಕ್ಟರ್.

WD 319—GPB—6,000—9-10-43